ಪ್ಲಟಿಕ್ ಧೊರೆಯು

ರಚಿಸಿದ

ಸಂಸಾರಕ್ರಮಗಳ ಪುಸ್ತಕವು



MANGALORE

PRINTED BY PLEBST & STOLZ, BASEL MISSION PRESS

1867



ಪ್ಲಟಿಕ್ ಧೊರೆಯು ರಚಿಸಿದ

ಸಂಸಾರಕ್ರಮಗಳ ಪುಸ್ತಕವು

೧ನೇ ಕ್ರಮವು.

ಘಳಿಸ ಬೇಕೆಂಬ ಚಿಂತೆಯು ಹೌರವಾಗುವ ಹಾಗೆ ಖರ್ಚು ಕಡಿಮೆ ಮಾಡ ಬೇಕು.

ಘಳಿಸ ಬೇಕೆಂಬ ಚಿಂತೆಯು ಹೌರವಾಗುವ ಹಾಗೆ ಖರ್ಚು ಕಡಿಮೆ ಮಾಡ ಬೇಕೆಂಬುವ ಈ ಸುಲಭವಾದ ಕ್ರಮವು ನನಗೆ ತಿಳಿಯ ಬರುವ ತನಕ ನನ್ನ ಮನೆತನವನ್ನು ಕ್ರಮವಾಗಿ ನಡಿಸುವದರ ವಿಷಯ ನಾನು ಬಹಳವಾಗಿ ಕಷ್ಟ ಪಟ್ಟೆನು; ಯಾಕಂದರೆ ಬಹಳ ಖರ್ಚು ಹಿಡಿಯುವ ಕುಟುಂಬದಲ್ಲಿ ಸುಸೂತ್ರ ಸಾಗ ಬೇಕಾದರೆ ಹೆಚ್ಚು ಘಳಿಸ ಬೇಕಾಗುವದು. ಆದರೆ ಹೆಚ್ಚು ಘಳಿಸುವದು ಮನುಷ್ಯರಿಗೆ ಲೆಖ್ಖವಿಲ್ಲದ ಚಿಂತೆಗಳನ್ನು ಹುಟ್ಟಿಸುವದರಿಂದ ಅವುಗಳನ್ನೆಲ್ಲಾ ಹೊತ್ತು ಕೊಂಡು ನಡಿಯು

ವದು ನನಗೆ ಸಾಕಾಗಿ, ಈ ಚಿಂತೆಗಳಿಂದ ಬಿಡುಗಡೆಯಾಗುವದು ಹ್ಯಾಗೆ? ಎಂದು ಹುಡುಕುವಾಗ ನನಗಿರುವ ಖರ್ಚಿನಲ್ಲಿ ಸ್ವಲ್ಪ ಕಡಿಮೆ ಮಾಡ ಬೇಕೆಂದು ಕಂಡು ಕೊಂಡೆನು. ಹೀಗೆ ಖರ್ಚು ಹತ್ತಿ ಹಿಡಿಯುವದಕ್ಕೆ ಕಲಿತ ಮೇಲೆ ನನಗೆ ಅಷ್ಟು ಬಹಳ ಸಂಪಾದಿಸುವದು ಅಗತ್ಯವಾಗಿರಲಿಲ್ಲ. ಹ್ಯಾಗಂದರೆ: ಮುಂಚೆ ನಾನು ಯಾವಾಗಲೂ ಮಾನವನ್ನು ಹುಡುಕಿ, ದೊಡ್ಡವನಂತೆ ಕಾಣಿಸಿ ಕೊಳ್ಳ ಬೇಕೆಂಬ ಆಶೆಯಿಂದಿದ್ದೆನು. ಇಂಥಾ ಆಶೆಯು ನನ್ನೊಳಗಿದ್ದ ಕಾರಣ, ನನ್ನ ಮನೆಗೆ ಬಂದ ಬಂದ ಪರಿಚಿತರೆಲ್ಲರಿಗೆ ನಾನು ಮಿತಿ ಮೀರಿ ಖರ್ಚು ಮಾಡಿ ಊಟ ನೀಡುತ್ತಿದ್ದೆನು. ಆದರೆ ಅಂದಿನಿಂದ ನಾನು ಅಂಥಾ ಅಭಿಮಾನವನ್ನು ಬಿಟ್ಟು, ನನ್ನ ಸಾಮರ್ಥ್ಯದ ಪ್ರಕಾರ ಪ್ರೀತಿಯಿಂದಲೇ ಮಾತ್ರ ಭೋಜನ ಕೊಡುವದಕ್ಕೆ ಆರಂಭಿಸಿದೆನು. ಆಗ ಮುಂಚೆ ಒಬ್ಬನ ಊಟಕ್ಕೆ ನಾನು ಮಾಡಿದ ಖರ್ಚಿನೊಳಗೆ ಕೆಲವು ಮಂದಿ ತೃಪ್ತಿಯಾಗಿ ಸಂತೋಷದಿಂದ ಹೋಗುವ ಹಾಗಾಯಿತು; ಮತ್ತು ಮುಂಚೆ ಸ್ನೇಹಿತರಿಗೆ ಸಾಧಾರಣ ಊಟವಾದ ಗೋಧಿಯ ರೊಟ್ಟಿ ಅನ್ನ ನೀಡಬೇಕಾದರೆ, ಎಷ್ಟು ನಾಚಿಕೆ ಪಡುತ್ತಿದ್ದೆನೋ, ಅದರ ಎರಡಷ್ಟಾಗಿ ಆ ಮೇಲೆ ಬೂಂದೆ ಮೊದಲಾದ ಮೃಷ್ಟಾನ್ನ ನೀಡುವದಕ್ಕೆ ನಾಚಿಕೆ ಪಟ್ಟೆನು.

ಅವಶ್ಯವಾದದ್ದು ಒಂದೇ! ಅದನ್ನು ಮರೀಯಳು ಆರಿಸಿ ತೆಗದು ಕೊಂಡಿದ್ದಾಳೆಂದು ಕರ್ತನು ಮಾರ್ಥಳಿಗೆ ಹೇಳಿದ ಈ ಷ

ನವಾದ ವಚನದ ಅಭಿಪ್ರಾಯವನ್ನು ಕೆಲವರು ಮಾತ್ರ ಸತ್ಯದ ಪ್ರಕಾರ ತಿಳುಕೊಂಡು ಅನುಭವಿಸಿದ್ದಾರೆ; ಆ ಅವಶ್ಯವಾದದ್ದು ಏನಂದರೆ: ಮೋಕ್ಷವೂ ನಿತ್ಯಜೀವವೂ. ಇದನ್ನು ನಾವು ಹ್ಯಾಗೆ ದೊರಕಿಸಿ ಕೊಳ್ಳ ಬೇಕೆಂದು ನಮಗೆ ಕಲಿಸುವ ದೇವರ ವಾಕ್ಯವನ್ನು ಓದಿ, ಸ್ಥಿರ ಮನಸ್ಸಿನಿಂದ ಅದನ್ನು ಧ್ಯಾನಿಸುವದಕ್ಕೆ ನಮಗೆ ಸಮಯ ಸಿಕ್ಕುವ ಹಾಗೆ ಬಹಳ ಖರ್ಚಿನ ಮನೆತನವನ್ನು ನಮ್ಮ ಕೊರಳಿಗೆ ಕಟ್ಟಿ ಕೊಳ್ಳ ಬಾರದು; ಯಾಕಂದರೆ ಇಂಥಾ ಮನೆತನದಿಂದ ನಮಗೆ ಈ ಲೋಕದಲ್ಲಿ ಚಿಂತೆಯೂ ತೊಂದರೆಯೂ ಹೆಚ್ಚಾಗುವದರಿಂದ ನಮ್ಮ ಆತ್ಮದ ರಕ್ಷಣೆಯನ್ನು ಉಂಟು ಮಾಡಿ ಕೊಳ್ಳುವದಕ್ಕೆ ಬೇಕಾದ ನಮ್ಮ ಹೊತ್ತಿಗೆ ಅಡ್ಡಿಯಾಗುವದು. ಆದರೆ ಬಹು ಜನರು ಆ ಒಂದೇ ಅವಶ್ಯವಾದದ್ದನ್ನು ಹುಡುಕದೆ, ಈ ಲೋಕದಲ್ಲಿ ತಮ್ಮ ಶರೀರ ಪೋಷಣೆಯಾಗುವ ಒಳ್ಳೇ ದಿವಸಗಳನ್ನು ಆಶಿಸುತ್ತಾರೆ. ಆದರೆ ಇಂಥಾದ್ದರ ದೆಸೆಯಿಂದ ಅವರು ಲೋಕದ ಸಂಗಡ ನಾಶವಾಗದೆ ಲೋಕಭಾವದಿಂದ ಅಗಲಿ ದೂರವಾಗುವ ಹಾಗೆ ಕರ್ತನು ಅವರನ್ನು ರೋಗ ಬಡತನ ಈ ಮುಂತಾದ ಕಷ್ಟ ಶ್ರಮೆಗಳಿಂದ ಶಿಕ್ಷಿಸುತ್ತಾನೆ. ಆದರೆ ದಯ ಉಳ್ಳ ದೇವರು ಈ ಪ್ರಕಾರ ನಮ್ಮನ್ನು ತನ್ನ ಪರದ ಮಹಿಮೆಗೆ ತಯಾರು ಮಾಡ ಬೇಕೆಂದಿದ್ದಾಗ್ಯೂ, ಬಹಳ ಮಂದಿ ತಮ್ಮ ಕಷ್ಟದ ಕಾಲಗಳಲ್ಲ್ಯಾದರೂ ಈ ಲೋಕದ ಮಾಯಕ್ಕೆ ದೂರವಾಗದೆ, ಗುಣುಗುಟ್ಟಿ, ಕೋಪಿಸಿ, ಇವನ್ನು ತಾಳಲಾರೆವೆಂದು ಚಟಪರಿ

ಸಿ, ನಾಲ್ಕು ದಿವಸಕ್ಕೆ ಮಾತ್ರ ಇರುವಂಥ ಪ್ರಪಂಚದ ಚಿಂತೆಗಳನ್ನೇ ಹೆಚ್ಚು ಮಾಡಿ, ಮನುಷ್ಯಬುದ್ಧಿಯನ್ನು ಮೀರುವಂಥ ದಿವ್ಯ ಸಮಾಧಾನವನ್ನು ಕಳಕೊಳ್ಳುತ್ತಾರೆ.

೨ನೇ ಕ್ರಮವು.

ಸಂಸಾರದಲ್ಲಿ ಸಮಾಧಾನ ಇರುವ ಹಾಗೆ ಸಹಾ ಖರ್ಚು ಕಡಿಮೆ ಮಾಡ ಬೇಕು.

ಐದು ಆರು ಜನರು ಮಾತ್ರ ಕೂಡಿ ಇರುವಂಥಾ ಒಂದೊಂದು ಕುಟುಂಬದೊಳಗೆ ಬಹಳವಾಗಿ ಝಗಳವೇಳುವದುಂಟು. ಆದರೆ ಅಬ್ರಹಾಮನ ಚರಿತ್ರೆಯಿಂದ ನಮಗೆ ಸ್ಪಷ್ಟವಾಗಿ ಕಾಣುವದೇನಂದರೆ: ಅವನ ಮನೆಯಲ್ಲಿ ಮುನ್ನೂರು ಮಂದಿ ಚಾಕ್ರಿಯವರಿದ್ದರು, ಆದರೂ ಅವನ ಕುಟುಂಬದಲ್ಲಿ ಅಷ್ಟು ಗೊಂದಲವೇಳದೆ, ಎಲ್ಲರು ತಮ್ಮ ತಮ್ಮೊಳಗೆ ಸಮಾಧಾನದಿಂದ ಇರುತ್ತಿದ್ದರು. ಇದರ ಕಾರಣವೇನಂದರೆ: ಅಬ್ರಹಾಮನು — ನಾವು ನಮ್ಮ ಪಿತೃಗಳಂತೆ ಈ ಲೋಕದಲ್ಲಿ ಅನ್ಯರೂ ಪರದೇಶಸ್ಥರೂ ಎಂದು ಈ ಲೋಕದ ಅನುಭೋಗಕ್ಕಿಂತ ಉತ್ತಮವಾದದ್ದು ಅಂದರೆ ಪರಲೋಕವಾದದ್ದು ಅಪೇಕ್ಷಿಸ ತಕ್ಕದ್ದೆಂದು ತಿಳುಕೊಂಡನು. (ಇಬ್ರಿ. ೧೧, ೧೩. ೧೬.) ಆದಕಾರಣ ಅವನು ದ್ರವ್ಯಾಶೆಗೆ ಕಿವಿ ಕೊಡದೆ, ದೀನ ಮನಸ್ಸಿನಿಂದ ನಡ ಕೊಂಡು, ಪರಲೋಕವಾದ

ದ್ದಕ್ಕೆ ವಿರೋಧವಾದದ್ದನ್ನೆಲ್ಲಾ ಬಿಟ್ಟು ಬಿಟ್ಟನು. ಆದರೆ ಈಗಿನ
ವರಲ್ಲಿ ಬಹು ಮಂದಿ ಹಾಗೆ ಇರದೆ, ದ್ರವ್ಯಾಶೆಯಿಂದ ತುಂಬಿ
ದವರಾಗಿ, ಗರ್ವ ಪಟ್ಟು, ಘಟ್ಟಿಮುಟ್ಟಾದ ಅಗ್ಗವಾಗಿರುವ ಸಾ
ಧಾರಣ ಸಾಮಾನುಗಳನ್ನು ತಾತ್ಸಾರ ಮಾಡಿ, ಡಂಬಾಚಾರಕ್ಕಾಗಿ
ಶೃಂಗಾರವಾಗಿರುವ ನಾಜೂಕಾದ ಸಾಮಾನುಗಳನ್ನು ಕೊಳ್ಳುವ
ರು. ಆದರೆ ಇಂಥಾ ನಾಜೂಕಾದ ವಸ್ತುಗಳು ರೂಢಿಯಾಗಿ ಪ
ಳ್ಳಾಗಿರುವದರಿಂದ, ಅವುಗಳಲ್ಲಿ ಒಂದು ಕೈ ತಪ್ಪಿ ಬಿದ್ದು ಒಡದು
ಹೋದರೆ, ಮನೆಯೊಳಗೆ ದೊಡ್ಡ ಝಗಳವೇಳುತ್ತದೆ. ಹೀಗಿ
ರುವದರಿಂದ ಯಾವನು ಅಬ್ರಹಾಮನ ಹಾಗೆ ನೀಟಾಗಿಯೂ
ದೀನನಾಗಿಯೂ ನಡದು, ಸಾಧಾರಣವಾದದ್ದರಲ್ಲಿ ಸಂತೋಷ
ವಾಗಿರುತ್ತಾನೋ, ಅವನ ಮನೆಯು ಸಮಾಧಾನದಲ್ಲಿ ನಿಲ್ಲುವ
ದು. ಒಂದು ದಿವಸದಲ್ಲಿ ಒಬ್ಬನು ಒಂದು ಜೋಡು ರೇಶಿಮೆ
ಯ ಕಾಲುವಸ್ತ್ರವನ್ನು ನನಗೆ ಇನಾಮಾಗಿ ಕೊಡ ಬಂದನು. ಆ
ಗ ನಾನು ಅವನಿಗೆ ಹೇಳಿದ್ದೇನಂದರೆ — ನನಗೆ ಇಂಥಾ ಘನವು
ಬೇಡ, ಆದರೂ ನಿನ್ನ ದಯವನ್ನು ನೆನಸಿ ಕೊಳ್ಳುವೆನು; ಯಾಕಂ
ದರೆ ನಾನು ಈ ಒಂದೇ ಕಾಲುಚೀಲ ಹಾಕಿ ಕೊಳ್ಳುವದರಿಂ
ದ ನನಗೆ ಹ್ಯಾಗಾದರೂ ೧೦೦೦ ರೂಪಾಯಿಯ ಖರ್ಚು ಮೈ
ಮೇಲೆ ಬಿದ್ದೀತು; ಹ್ಯಾಗಂದರೆ, ಅದನ್ನು ನಾನು ಹಾಕಿದರೆ
ನನ್ನ ಸರ್ವ ದುಸ್ತುಗಳನ್ನು ಅದಕ್ಕೆ ಸರಿ ಮಾಡ ಬೇಕಾಗುತ್ತ
ದೆ; ಇದು ಮಾತ್ರವಲ್ಲದೆ ನನ್ನ ಹೆಂಡತಿ ಮಕ್ಕಳಿಗೆ ಹೆಚ್ಚಿನ

ಉಡಿಗೆ ಕೊಟ್ಟು ಖರ್ಚು ಹೆಚ್ಚು ಮಾಡ ಬೇಕಾಗುವದು; ಈ ಪ್ರಕಾರ ನಮ್ಮೆಲ್ಲರ ಉಡಿಗೆಗಳನ್ನು ಬದಲಾಯಿಸಿದ ಹಾಗೆಯೇ ನನ್ನ ಮನೆಯ ಎಲ್ಲಾ ಸಾಮಾನುಗಳನ್ನು ಬದಲಾಯಿಸುವ ಹಂಗಿನಲ್ಲಿರುವೆನು; ಇದರ ಹೊರ್ತು ಊಟದ ಮೇಜು ಮೇಜುವಸ್ತು ಕುರ್ಚಿ ಅಲಮೈರ್ ಬೆಳ್ಳಿಯ ಸೌಟುಗಳು ರಥ ಕುದುರೆ ಮುಂತಾದ್ದೆಲ್ಲಾ ಬೇಕಾಗುವದು; ಅದರಿಂದ ಈ ಕಾಲು ವಸ್ತ್ರಗಳನ್ನು ದಯ ಮಾಡಿ ಹಿಂದಕ್ಕೆ ತಕ್ಕೊಂಡು, ಮನ್ನಿಸ ಬೇಕು ಎಂದು ಹೇಳಿದೆನು. ಈ ಪ್ರಕಾರ ಒಂದೇ ಅವಶ್ಯವಿಲ್ಲದ ಹೆಚ್ಚಿನ ಜೀನಸಿನಿಂದ ಮುಂಚೆ ನೆನಸದಷ್ಟು ಖರ್ಚು ಮೈ ಮೇಲೆ ಬಿದ್ದು, ಸಂಸಾರದಲ್ಲಿ ಸಂಕಟ ಮಾತ್ರ ಹೆಚ್ಚುವದು.

೩ನೇ ಕ್ರಮವು.

ನಾಲ್ಕು ತರದ ಚಿಂತೆಗಳ ವಿಷಯ.

೧. ಹೊಟ್ಟೆಯ ಚಿಂತೆಯು. ಈ ಚಿಂತೆಯು ಬಹು ಮನುಷ್ಯರನ್ನು ಕಾಡುತ್ತದೆ. ಅವರು — ನಾವು ಏನು ಉಣ್ಣುವಾ, ಏನು ಹೊದ್ದು ಕೊಳ್ಳುವಾ ಎಂಬ ಚಿಂತೆಗಳಿಗೆ ಕಿವಿ ಕೊಟ್ಟು, ಅವುಗಳಿಗೆ ಒಳ ಬಿದ್ದು, ಗಲಿಬಿಲಿಯಿಂದ ತುಂಬಿದವರಾಗಿ ಗಡಬಡಿಸುತ್ತಾರೆ. ಆದರೆ ಈ ಒಣಚಿಂತೆಗಳಿಂದ ನೊಂದು ಕೊಳು

ವದು ವ್ಯರ್ಥವಾಗಿದೆ. ಯಾಕಂದರೆ ಒಬ್ಬನು ತನ್ನ ಭರವಸವನ್ನು ಕರ್ತನ ಮೇಲಿಟ್ಟು, ಆತನಿಗೆ ಪ್ರಾರ್ಥನೆ ಮಾಡುತ್ತಾ, ತನ್ನ ಕೆಲಸವನ್ನು ಯಥಾರ್ಥವಾಗಿ ನಡಿಸಿದರೆ ಅಂಥವನ ದಿನದಿನದ ಕೆಲಸವನ್ನು ಕರ್ತನು ಆಶೀರ್ವದಿಸಿ, ಅವನಿಗೆ ಎಂದೂ ಕೊರತೆಯಾಗದ ಹಾಗೆ ಅವನನ್ನು ಪರಾಮರಿಸುತ್ತಾನೆ. ಇದಕ್ಕೆ ದಾವೀದನು ಸಹಾ ಪ್ರಮಾಣ ಕೊಟ್ಟು ಹೇಳಿದ್ದೇನಂದರೆ: ಹುಡುಗನಾಗಿದ್ದೆನು, ಮುದುಕನಾಗಿದ್ದೇನೆ, ಆದರೆ ನೀತಿವಂತನು ಬಿಡಲ್ಪಟ್ಟದ್ದನ್ನೂ ಅವನ ಬೀಜವು ರೊಟ್ಟಿ ಹುಡುಕುವದನ್ನೂ ನಾನು ನೋಡಲಿಲ್ಲ; (ಕೀರ್ತ. ೩೭, ೨೫.) ಯಾಕಂದರೆ ದೇವರು ತನ್ನಲ್ಲಿ ಭರವಸವಿಡುವವನಿಗೆ — ನಾನು ನಿನ್ನನ್ನು ಬಿಟ್ಟು ಬಿಡೆನೆಂದು, ನಿನ್ನ ಕೈ ಬಿಡೆನೆಂದು ಹೇಳಿದ್ದಾನೆ. (ಇಬ್ರಿ. ೧೩, ೫.) ಹೀಗಿರುವದರಿಂದ ಏನು ಉಣ್ಣುವಾ, ಇಲ್ಲವೆ ಏನು ಕುಡಿಯುವಾ, ಇಲ್ಲವೆ ಏನು ಹೊದ್ದು ಕೊಳ್ಳುವಾ ಎಂದು ಚಿಂತೆ ಪಡ ಬೇಡಿರಿ; ಯಾಕಂದರೆ ಇವುಗಳನ್ನೆಲ್ಲಾ (ದೇವರನ್ನು ತಿಳಿಯದ) ಜನಾಂಗಗಳವರು ಹುಡುಕುತ್ತಾರೆ. ಆದರೆ ಇವುಗಳೆಲ್ಲಾ ನಿಮಗೆ ಬೇಕು ಎಂದು ನಿಮ್ಮ ಪರಲೋಕದ ತಂದೆಯು ಬಲ್ಲನು. ಹೀಗಿರುವದರಿಂದ ನೀವು ಮೊದಲು ದೇವರ ರಾಜ್ಯವನ್ನೂ ಆತನ ನೀತಿಯನ್ನೂ ಹುಡುಕಿರಿ; ಆಗ ಇವುಗಳೆಲ್ಲಾ ನಿಮಗೆ ಕೊಡಲ್ಪಡುವವು. (ಮತ್ತಾ. ೬, ೩೧—೩೩.)

೨. ಮಾಂಸದ ಇಚ್ಛೆಗಳ ಚಿಂತೆಯು. ಮಾಂಸದ ಇಚ್ಛೆ

ಗಳು ಯಾವವಂದರೆ: ೧ನೇದು ಕಾಮವು, ೨ನೇದು ಹೊಟ್ಟೆಬಾ
ಕತನವು. ಈ ಎರಡು ತರದ ಆಶೆಗಳು ಲೆಖ್ಖವಿಲ್ಲದ ಮನುಷ್ಯರ
ಲ್ಲಿ ಹಬ್ಬಿ, ಅವರನ್ನು ಹಾಳು ಮಾಡಿ ಬಿಡುತ್ತವೆ. ಎಷ್ಟೋ
ಜನರು ಇಂಥಾ ಇಚ್ಛೆಗಳಿಗೆ ಬೇಕಾಗಿ ಮನಸ್ಸು ಕೊಟ್ಟು, ಅವುಗ
ಳನ್ನು ತೀರಿಸುವದಕ್ಕಾಗಿ ಮೋಜು ಆಟಗಳನ್ನು ಮಾಡಿ, ತಮ್ಮ
ಆಶೆಗೆ ಅನುಕೂಲವಾದ ಬೇರೆ ಬೇರೆ ಯುಕ್ತಿಯ ಅಡ್ಡಮಾರ್ಗ
ಗಳನ್ನು ಆಗಾಗ್ಯೆ ಹುಡುಕಿ ತೆಗೆಯುತ್ತಾರೆ; ಮತ್ತು ತಾವು ಇ
ದರಿಂದ ಶರೀರಾತ್ಮದ ಪ್ರಕಾರ ಪೂರ್ಣವಾಗಿ ಕೆಟ್ಟು ಹೋಗುತ್ತೇ
ವೆಂದು ತಿಳಿದಾಗ್ಯೂ ಹಗಲು ರಾತ್ರಿಯಲ್ಲಿ ಅಂಥಾ ಅಶುದ್ಧ
ವಾದ ಇಚ್ಛೆಗಳನ್ನು ಮನಸ್ಸಿನಲ್ಲಿ ಹುಟ್ಟಿಸಿ ಕೊಂಡು, ಅವುಗಳ
ಲ್ಲಿ ಸಂತೋಷ ಪಡುತ್ತಾರೆ. ಇಂಥಾ ಕಳಂಕವಾದವರಿಗೂ ಅವಿ
ಶ್ವಾಸಿಗಳಿಗೂ ಏನೂ ಶುದ್ಧವಾಗಿರುವದಿಲ್ಲ; ಅವರ ಬುದ್ಧಿಯೂ
ಮನಸ್ಸಾಕ್ಷಿಯೂ ಮೈಲಿಗೆಯಾಗಿವೆ; ಅವರು ದೇವರನ್ನು ಬಲ್ಲೆ
ವೆಂದು ಹೇಳಿ, ಅಸಹ್ಯರಾಗಿ ತಮ್ಮ ದುಷ್ಟ ಕ್ರಿಯೆಗಳಿಂದಲೇ
ಆತನನ್ನು ಬೊಂಕುತ್ತಾರೆ. (ತೀತ. ೧, ೧೫. ೧೬.) ಇಂಥಾ
ಆಶೆಗಳಿಗೆ ಸ್ವಾಧೀನವಾದವರು ಅಗದಿ ದಿಕ್ಕಿಲ್ಲದವರಾಗಿರುತ್ತಾ
ರೆ; ಯಾಕಂದರೆ ಕರ್ತನು ಅವರಿಗೆ ಏನೂ ಸಹಾಯ ಮಾಡ
ಲಾರನು. ಅವರು ಬೇಡಿ ಕೊಂಡರೂ ಹೊಂದುವದಿಲ್ಲ; ಯಾ
ತಕ್ಕಂದರೆ ಕರ್ತನು ಇಂಥವರಿಗೆ ಕೊಟ್ಟನಂದರೆ ಅವರು ಆತನಿಂದ
ಹೊಂದಿದ ದಾನಗಳನ್ನು ತಮ್ಮ ಆಶೆಗಳಿಗೆ ವೆಚ್ಚ ಮಾಡುವರು.

ಆದರೆ ದೇವರು ಪಾಪಕ್ಕೆ ಆಸ್ಪದ ಕೊಡುವಾತನಲ್ಲ. ಹೀಗಿರುವದರಿಂದ ಅನೇಕರು ಆತನಿಗೆ ಶತ್ರುಗಳಾಗಿ ನಡಿಯುತ್ತಾರೆ; ಅವರ ದೇವರು ಹೊಟ್ಟೆಯೇ; ಅವರ ಮಹಿಮೆಯು ನಾಚಿಗೆಯಲ್ಲಿಯೇ; ಅವರ ಅಂತ್ಯವು ನಾಶನವೇ! ಆದಕಾರಣ ಒಬ್ಬೊಬ್ಬನು ದೇವರನ್ನರಿಯದ ಜನಾಂಗಗಳ ಪ್ರಕಾರ ದುರಾಶೆ ಪಡದೆ, ಪರಿಶುದ್ಧತ್ವದಲ್ಲಿಯೂ ಘನತೆಯಲ್ಲಿಯೂ ತನ್ನ ಘಟವನ್ನು (ಶರೀರವನ್ನು) ಕಾಪಾಡ ತಿಳಿದು ಕೊಳ್ಳಲಿ. (ಫಿಲಿ. ೩, ೧೯. ಥೆಸ್ಸ. ४, ४.)

೩. ಐಶ್ವರ್ಯದ ಚಿಂತೆಯು. ಈ ಚಿಂತೆಯು ಸಹಾ ಬಹು ಜನರಿಗೆ ಮೋಸ ಮಾಡಿ, ರಕ್ಷಣ್ಯವನ್ನು ಹೊಂದ ಬೇಕೆಂಬುವವರಿಗೆ ಸಹಾ, ಅವರು ಅದನ್ನು ಆತುರದಿಂದ ಹುಡುಕದ ಹಾಗೆ, ಅಡ್ಡಿ ಮಾಡುತ್ತದೆ; ಯಾಕಂದರೆ ಐಶ್ವರ್ಯವಂತರಾಗ ಇಚ್ಛೈಸುವವರು ಶೋಧನೆಯಲ್ಲಿಯೂ ಉರುಲಿನಲ್ಲಿಯೂ ಬುದ್ಧಿಇಲ್ಲದ ನಷ್ಟವುಳ್ಳ ಅನೇಕ ಆಶೆಗಳಲ್ಲಿಯೂ ಬೀಳುತ್ತಾರೆ. ಅವು ಮನುಷ್ಯರನ್ನು ನಾಶನದಲ್ಲಿಯೂ ಲಯದಲ್ಲಿಯೂ ಮುಣುಗಿಸುತ್ತವೆ; ಯಾಕಂದರೆ ದ್ರವ್ಯಾಶೆಯು ಸಕಲ ಕೇಡುಗಳ ಬೇರಾಗಿದೆ. (೧ತಿಮೊ. ೬, ೯. ೧೦.) ದ್ರವ್ಯ ಆಶಿಸುವವರಿಗೆ ದೇವರ ವಾಕ್ಯವು ಸ್ವಲ್ಪ ಗೊತ್ತಿದ್ದರೂ ಅದು ಬೆಳದು ಫಲ ಫಲಿಸದ ಹಾಗೆ, ಈ ಲೋಕದ ಚಿಂತೆಗಳೂ ಐಶ್ವರ್ಯದ ಮೋಸವೂ ಹೆಚ್ಚಾಗಿ, ವಾಕ್ಯಕ್ಕೆ ಇರಿಕಿಸುವದರಿಂದ ನಿಷ್ಫಲವಾಗುತ್ತಾರೆ. ಹೀಗಿರುವದ

ರಿಂದ ತುಷ್ಟಿಯ ಸಹಿತವಾದ ಭಕ್ತಿಯಿಂದಿದ್ದು, ಅನ್ನ ವಸ್ತ್ರವಿದ್ದರೆ ಅದು ಸಾಕೆಂದೆಣಿಸುವಾ. ಆದರೆ ಬಹಳ ಮಂದಿ ಈ ದ್ರವ್ಯಾಶೆಯಿಂದ ತಮ್ಮನ್ನು ಮಾತ್ರವಲ್ಲ, ತಮ್ಮ ಮಕ್ಕಳನ್ನು ಸಹಾ ಅದರಿಂದ ತುಂಬಿಸಿ, ಅವರನ್ನು ಕೆಡಿಸಿ ಬಿಡುವರು. ಆದರೆ ಸೊಲೊಮೋನನ ಪ್ರಾರ್ಥನೆಯಿಂದ ನಮಗೆ ತಿಳಿಯ ಬರುವ ಪ್ರಕಾರ ದ್ರವ್ಯಾಶೆಯು ನಿಜ ಭಕ್ತರ ಲಕ್ಷಣವಲ್ಲ. ಹ್ಯಾಗಂದರೆ: ಅವನು ಐಶ್ವರ್ಯದ ಮೇಲೆ ಮನಸ್ಸಿಡದೆ, ಕರ್ತನಿಗೆ — ಓ ಕರ್ತನೇ! ಐಶ್ವರ್ಯವು ನನಗೆ ಬೇಡ, ಬಡತನವು ಸಹಾ ಬೇಡ, ಸಾಧಾರಣವಾದ ಸ್ಥಿತಿಯನ್ನೇ ನನಗೆ ದಯಪಾಲಿಸೆಂದು ಬೇಡಿ ಕೊಂಡನು. ಬಡವನಾಗಿರುವದು ಕಷ್ಟವೇ ಸರಿ; ಆದರೂ ನೀನು ಈ ಲೋಕದಲ್ಲಿ ಐಶ್ವರ್ಯವನ್ನು, ಇಲ್ಲವೇ ಸಂಭ್ರಮದ ದಿವಸಗಳನ್ನು ಆಶಿಸದೆ, ಸೊಲೊಮೋನನ ಬುದ್ಧಿಯನ್ನು ಕಲಿತುಕೋ; ಯಾತಕ್ಕಂದರೆ ಈ ಲೋಕದಲ್ಲಿ ತನಗೆ ಆನಂದವಾಗ ಬೇಕೆಂದು ಬಯಸುವವನು ಅದರಿಂದ ತನಗೆ ನಿಜವಾದ ಸಮಾಧಾನವು ದೊರಕುವದಿಲ್ಲವೆಂದು ಬರಬರುತ್ತಾ ತಿಳಿದು, ಮೆಲ್ಲ ಮೆಲ್ಲಗೆ ಅದಕ್ಕೆ ಬೇಸರವಾಗುವನು. ಆದಕಾರಣ ಅನೇಕ ದ್ರವ್ಯಸ್ಥರು ತಾವು ಸಾಧಾರಣವಾದ ಬಡವರಾಗಿದ್ದರೆ ಒಳ್ಳೇದು ಎಂತ ಹೇಳುವರು. ಒಂದು ದಿವಸದಲ್ಲಿ ನಾನು ಒಂದು ಪುಸ್ತಕವನ್ನು ಕಂಡೆನು. ಅದರಲ್ಲಿ ತನ್ನನ್ನು ತಾನೇ ಆಳ ಶಕ್ತನಾದವನೇ ಪ್ರವೀಣನೆಂತ ಹೇಳಿ ಇತ್ತು. ಅದರಲ್ಲಿ ಹೇಳಿದಂತೆ ಪ್ರವೀಣನಾಗ ಮನಸ್ಸು

ಳ್ಳವನು ತನ್ನ ಇಚ್ಛೆ ಮುರಿದು, ತನಗೆ ವಿಷ ಕಂಡದ್ದನ್ನೇ ಮಾಡ ಬೇಕು. ಇದು ತನಗೆ ರೂಢಿಯಾಗುವ ಹಾಗೆ ತನಗೆ ಬಹಳ ಸಾರಿ ಸಂಭವಿಸುವ ಕಾರ್ಯದಲ್ಲಿಯೇ ಅದನ್ನು ಮಾಡ ತೊಡಗ ಬೇಕು. ಆದದರಿಂದ ಊಟ ಮಾಡುವದು ಯಾವಾಗಲೂ ಅನೇ ಕ ಸಾರಿ ಸಂಭವಿಸುವದರಿಂದ ಅದರಲ್ಲಿಯೇ ಇದನ್ನು ನಾನು ಆ ರಂಭಿಸಿ, ನನಗೆ ಸರಿ ಬಾರದ್ದನ್ನೇ ತಿಂದು, ಸರಿ ಕಂಡದ್ದನ್ನು ತಿನ್ನ ವದೇ ಬಿಟ್ಟೆನು. ಹೀಗೆ ಮಾಡಿದದರಿಂದ ನನಗೆ ಬಹು ಲಾಭ ವಾಯಿತು; ಯಾತಕ್ಕಂದರೆ ನನಗೆ ಸರಿ ಬೀಳದ ಸಾಧಾರಣವಾದ ಊಟವನ್ನು ಉಣ್ಣುವದಕ್ಕೆ ಕಲಿತ ಮೇಲೆ ನನಗೆ ಬಹಳ ಖರ್ಚು ಬೇಕಾಗಲಿಲ್ಲ. ಮತ್ತು ಖರ್ಚು ಕಡಿಮೆ ಹಿಡಿದಾಗಲೇ, ನಾನು ಮುಂಚಿನಂತೆ ಮತ್ತೊಬ್ಬರ ಹಂಗಿನಲ್ಲಿರದೆ, ನನ್ನಷ್ಟಕ್ಕೆ ನಾನೇ ಅರಸನಾಗಿದ್ದೆನು.

೪. ಮಾನದ ಚಿಂತೆಯು. ಈ ಚಿಂತೆಯ ಬುಡವು ಅ ಹಂಕಾರವಾಗಿರುವದರಿಂದ ಅದು ಅಹಂಕಾರದ ತಂದೆಯಾದ ಪಿ ಶಾಚನಿಂದ ಬರುವಂಥಾದ್ದಾಗಿದೆ. ಇಂಥಾ ಮಾನವನ್ನು ಹುಡು ಕುವವರು ಮೇಲೆ ಹೇಳಿದ ಪ್ರಕಾರ, ಈ ಲೋಕದ ಭೋಗವನ್ನು ಅಪೇಕ್ಷಿಸುವದಲ್ಲದೆ, ಮತ್ತೊಬ್ಬರಿಂದ ಕೀರ್ತಿಯನ್ನು ಸಹಾ ಹೊಂ ದ ಬೇಕೆಂದು ಪ್ರಯಾಸ ಪಡುತ್ತಾರೆ. ಅದು ತಮಗೆ ತಪ್ಪದೆ ಸಿಗುವ ಹಾಗೆ ಹಗಲು ರಾತ್ರಿಯಲ್ಲಿ ವಿಶ್ರಾಂತಿ ಇಲ್ಲದೆ ಘಳಿಸು ವದರಲ್ಲಿಯೇ ಇರುತ್ತಾರೆ; ಮತ್ತು ಸ್ವಲ್ಪ ಹಣ ತಮ್ಮ ಕೈಗೆ

ಬಂದಾಗಲೇ ಡಂಬಾಚಾರಕ್ಕೆ ಅದನ್ನು ಖರ್ಚು ಮಾಡಿ, ತಮಗೆ ಅವಶ್ಯವಿಲ್ಲದಂಥ ತಮ್ಮ ಸಾಮರ್ಥ್ಯಕ್ಕೆ ಮಿಕ್ಕಿದ ಸಾಮಾನುಗಳನ್ನು ಕೊಂಡು, ತಮ್ಮನ್ನು ಐಶ್ವರ್ಯವಂತರೆಂದು ಹೊಗಳಿಸಿ ಕೊಳ್ಳ ಬೇಕೆಂದಿರುತ್ತಾರೆ. ಮತ್ತು ಇಂಥವನಿಗೆ ಸ್ವಥಾ ಬದುಕು ಇಲ್ಲದೆ ಇದ್ದರೂ ಮತ್ತೊಬ್ಬರಿಂದ ಬಾಡಿಗೆಗೆ ತಕ್ಕೊಂಡು ಬಂದು, ಬಡಿವಾರ ಮಾಡುತ್ತಾನೆ. ಇಂಥಾ ಗರ್ವಿಷ್ಠನ ಸೊಕ್ಕಿಗೆ ಯಾವದಾದರೂ ಒಂದು ಪೆಟ್ಟು ತಾಕಿದರೆ ಅದನ್ನು ಸೈರಿಸಿ ಕೊಳ್ಳಲಾರನು. ಆದರೆ ತನ್ನನ್ನು ಹೆಚ್ಚಿಸಿ ಕೊಳ್ಳುವವನು ತಗ್ಗಿಸಲ್ಪಡುವನು; ಯಾಕಂದರೆ ದೇವರು ಗರ್ವಿಷ್ಠರನ್ನು ಎದುರಿಸಿ, ದೀನರಿಗೆ ಕೃಪೆಯನ್ನು ಕೊಡುತ್ತಾನೆ. ಅವಶ್ಯವಾದದ್ದರೊಳಗೆ ಕೊರತೆಯಿಂದಿದ್ದು, ಚಿಂತೆ ಪಡುವವರಿಗೆ ದೇವರು — ನೀವು ನಿಮ್ಮ ಚಿಂತೆಗಳನ್ನೆಲ್ಲಾ ನನ್ನ ಮೇಲೆ ಹಾಕಿರಿ, ನಾನೇ ನಿಮಗೋಸ್ಕರ ಚಿಂತಿಸುತ್ತೇನೆಂದು ಹೇಳಿದ್ದಾನೆ. ಆದರೆ ಅಂಥವುಗಳ ಹೊರ್ತು ಉಳಿದ ವ್ಯರ್ಥವಾದ ಚಿಂತೆಗಳಿಗೆ ದೇವರು ಸಹಾಯ ಮಾಡದೆ ಇರುವದರಿಂದ ಅವರು ತಾವೇ ಅವುಗಳನ್ನು ಹೊತ್ತು ಕೊಳ್ಳ ಬೇಕಾಗಿರುತ್ತಾರೆ. ಆದರೆ ದೇವರು ಕೈ ಹಚ್ಚದ ಜಾರವಾದ ನೊಗವನ್ನು ಮನುಷ್ಯನು ತಾನೇ ಹೊರ ಬೇಕಾದರೆ ಎಷ್ಟೋ ಕಠಿಣವು! ಆದಕಾರಣ ಮನುಷ್ಯರು ಮಾಂಸದ ಐಶ್ವರ್ಯದ ಮಾನದ ಚಿಂತೆಗಳಿಗೆ ಆಸ್ಪದ ಕೊಡದೆ ಇದ್ದರೆ ಅವರ ಮನೆತನದಲ್ಲಿ ಅಷ್ಟು ಕಷ್ಟಗಳು ಇರದೆ, ಪ್ರಪಂಚವು ಸುರಳಿತವಾಗಿ ನಡಿಯುವದು.

ಆದರೆ ಯಾವನು ಈ ಲೋಕದ ಮಹಿಮೆಯನ್ನು ಹೊಂದ ಆಶಿಸುತ್ತಾನೋ, ಅವನಿಗೆ ಹೇಳ ಕೂಡದಷ್ಟು ಕಷ್ಟಗಳು ಇರುವವು. ಇದರಿಂದಲೇ ವ್ಯರ್ಥ ಆಶೆಗಳಲ್ಲಿ ಸಿಕ್ಕೊಂಡಿರುವ ಲೋಕಭಾವದವರಿಗೂ ಸತ್‌ಕ್ರೈಸ್ತರಿಗೂ ಇರುವ ದೊಡ್ಡ ವ್ಯತ್ಯಾಸವು ಕಾಣಬರುತ್ತದೆ.

೪ನೇ ಕ್ರಮವು.

ಜೀವನಕ್ಕೆ ಬೇಕಾದದ್ದನ್ನು ವ್ಯಾಪಾರದಿಂದ ಸಂಪಾದಿಸುವದಕ್ಕಿಂತ ಕೈಕೆಲಸ ಮಾಡಿ ಸಂಪಾದಿಸುವದು ಉತ್ತಮ.

ನಾನು ಒಂದು ಊರಿನಲ್ಲಿ ಬೋಧಕನಾಗಿರುವಾಗ ಅಲ್ಲಿಯ ವ್ಯಾಪಾರಸ್ಥನಾದ ಒಬ್ಬ ಪಂಚನು — ಕೆಲಸ ಮಾಡಿ ಸಂಪಾದಿಸುವದಕ್ಕಿಂತ ಮಾತಿನಿಂದಲೇ ಸಂಪಾದಿಸುವದು ಒಳ್ಳೇದನ್ನುತ್ತಿದ್ದನು. ಆದರೆ ಆಗಲೇ ಆ ಮಾತಿನ ಅರ್ಥವನ್ನು ನಾನು ಚಂದಾಗಿ ತಿಳಿಯಲಿಲ್ಲ. ತರುವಾಯ ನಾನು ಆ ಊರು ಬಿಟ್ಟು ಹೋದ ಕೆಲವು ದಿವಸಗಳ ಮೇಲೆ ಆ ಪಂಚನು ದಿವಾಳಿ ತೆಗದನೆಂದು ಕೇಳಿದೆನು. ಆಗ ಕೆಲಸ ಮಾಡಿ, ಸಂಪಾದಿಸುವದಕ್ಕಿಂತ ಮಾತಿನಿಂದಲೇ ಸಂಪಾದಿಸುವದು ಒಳ್ಳೇದೆಂಬ ಅವನ ಮಾತು ನನಗೆ ನೆನಪು ಆಯಿತು. ಆ ಮೇಲೆ ನಾನು ಆ ಮಾತನ್ನು ತಿರು

ಗಿಸಿ, ಉಪಜೀವನಕ್ಕಾಗಿ ವ್ಯಾಪಾರ ಮಾಡುವದಕ್ಕಿಂತ ಕೆಲಸ ಮಾಡುವದೇ ಒಳ್ಳೇದೆಂದು ಹೇಳಿದೆನು. ಯಾಕಂದರೆ ಕೈಕೆಲಸದಿಂದ ಒಂದು ವೇಳೆ ಬೇಗನೆ ಐಶ್ವರ್ಯವಂತರಾಗದೆ ಇದ್ದರೂ ಜಾಗ್ರತೆಯಿಂದ ತನ್ನ ಕೆಲಸ ಮಾಡುವವನು ಎಂದಿಗೂ ಬಡವನಾಗ ಕೂಡದು; ಆದರೆ ವ್ಯಾಪಾರ ಮಾಡುವವರಲ್ಲಿ ಅನೇಕರು ಬಡವರಾಗುತ್ತಾರೆ. ಆದರೆ ನಾವು ಮಾಡುವಂಥ ಕೈಕೆಲಸವು ದೇವರ ಚಿತ್ತಕ್ಕೆ ಅನುಕೂಲವಾಗಿದ್ದರೆ ಅದರಲ್ಲಿ ಆತನ ಆಶೀರ್ವಾದವು ಇರುತ್ತದೆ. ಕೆಲಸಕ್ಕೆ ದೇವರ ಆಶೀರ್ವಾದವೇ ಮುಖ್ಯವಾದದ್ದು. ಬರೇ ಬುದ್ಧಿಯು ಮನುಷ್ಯನನ್ನು ಬದುಕಿಸಲಾರದು. ಈ ಮಾತು ಒಕ್ಕಲತನದಲ್ಲಿ ಚಂದಾಗಿ ಪ್ರತ್ಯಕ್ಷವಾಗೆದೆ. ಹ್ಯಾಗಂದರೆ ಅವರು ತಮಗಿರುವ ಬುದ್ಧಿಯ ಪ್ರಕಾರ ಹೊಲವನ್ನು ಎಷ್ಟು ನೆಟ್ಟಗೆ ಮಾಡಿದರೂ ಮಳೆ ಮೊದಲಾದ ದೇವರ ಆಶೀರ್ವಾದಗಳು ಬಾರದ ಪಕ್ಷದಲ್ಲಿ ಅವರ ಬುದ್ಧಿಯೆಲ್ಲಾ ವ್ಯರ್ಥವಾಗಿರುವದು. ಒಂದು ದಿವಸದಲ್ಲಿ ಕೆಲವು ಮಂದಿ ರೈತರು ನನ್ನ ಬಳಿಗೆ ಬಂದು, ನಮ್ಮ ಹೊಲವು ಬಹಳ ಸಣ್ಣದು, ಮತ್ತು ಬಹು ಸುಮಾರ ಸಹಾ ಇರುವದರಿಂದ, ಅದರೊಳಗೆ ನಾವು ಉಪಜೀವನ ಮಾಡುವದು ಕಠಿಣವಾಗೆದೆ, ಇನ್ನು ಮೇಲೆ ನಾವು ಹ್ಯಾಗೆ ಮಾಡೋಣ? ಅಂತಂದು ಗೋಳಾಡಲಾರಂಭಿಸಿದರು. ಅದಕ್ಕೆ ನಾನು ಹೇಳಿದ್ದು — ಕೆಲವು ರೊಟ್ಟಿ, ಸ್ವಲ್ಪ ಮೀನುಗಳಿಂದ ಯೇಸು ಕ್ರಿಸ್ತನು ೫೦೦೦ ಮನುಷ್ಯರನ್ನು ತೃಪ್ತಿ ಪಡಿಸಿ, ಅದ

ರೊಳಗೆ ಇನ್ನೂ ೧೨ ಪುಟ್ಟಿ ತುಂಬ ಚೂರು ಉಳಿಸಿದನೆಂದು ನೀವು ಓದಲಿಲ್ಲವೋ? ಆತನು ಇಷ್ಟು ಸ್ವಲ್ಪದರಿಂದ ಅಷ್ಟು ದೊಡ್ಡ ಸಮೂಹವನ್ನು ತೃಪ್ತಿ ಪಡಿಸಿದ ಮೇಲೆ ನಿಮ್ಮ ಸಣ್ಣ ಹೊಲದಿಂದ ಸಹಾ ನಿಮಗೆ ಸಾಕಷ್ಟು ಪೈರನ್ನು ಬೆಳಸಲಾರನೇ? ನಿಶ್ಚಯವಾಗಿ ಬೆಳಿಸುವನು. ಆದದರಿಂದ ನೀವು ನಿಮ್ಮ ಸಣ್ಣದಾದ ಹೊಲವನ್ನು ಕೃಷಿ ಮಾಡುವಾಗ ಆತನ ಮೇಲೆ ಮಾತ್ರ ನಿಮ್ಮ ಭರವಸವನ್ನಿಟ್ಟು, ಆತನ ಆಶೀರ್ವಾದವನ್ನು ಬೇಡಿಕೊಂಡರೆ ನಿಮ್ಮ ಸಣ್ಣ ಹೊಲದಿಂದಲೇ ದೊಡ್ಡ ಜಮೀನದಾರರಿಗೆ ದೊರಕುವಷ್ಟೇ ರೊಟ್ಟಿಯು ನಿಮಗೆ ಸಹಾ ದೊರಕುವದು. ಏನಂದರೆ ಅವರು ತಮ್ಮದರಿಂದ ತೃಪ್ತಿ ಆಗುವಂತೆ ನೀವು ನಿಮ್ಮದರಿಂದ ತೃಪ್ತಿ ಆಗುವಿರಿ. ಮತ್ತು ಅವರಿಗೆ ಉಳಿಯುವಂತೆ ನಿಮಗೂ ಉಳಿಯುವದು. ಈ ಪ್ರಕಾರ ದೇವರ ಆಶೀರ್ವಾದವು ನಮ್ಮ ಜೀವದ ಮೂಲಾಧಾರವೆಂದು ಅವರಿಗೆ ಶಿಳಿಸಿದೆನು. ಆತನಿಗೆ ಸಮರ್ಪಕವಾದ ಕೈಕೆಲಸದಲ್ಲಿ ಆತನ ಆಶೀರ್ವಾದ ಉಂಟು.

೫ನೇ ಕ್ರಮವು.

ದೇವರ ಮೇಲೆ ಭರವಸವಿಟ್ಟು ವಿವೇಕದಿಂದ ಸಂಸಾರ ನಡಿಸುವವರ ಕುಟುಂಬವು ಹಾಳಾಗಲಾರದು.

ಒಂದು ಕುಟುಂಬದಲ್ಲಿ ಅನೇಕರು ಜಾಗ್ರತೆಯಿಂದ ದುಡಿದಾಗ್ಯೂ ಅದರಿಂದ ತಮ್ಮ ಕುಟುಂಬವು ಸಂರಕ್ಷಣೆಯಾಗಲಿಕ್ಕಿಲ್ಲವೆಂದೂ ಆದಕಾರಣ ತಾವು ಬರಬರುತ್ತಾ ಅರಿವಿಹರಕರಾಗಿ, ಹಾಳಾಗಿ ಹೋದೇವೆಂದೂ ನೆನಸಿ, ಚಯದಿಂದ ಇದ್ದರು. ಅವರಿಗೆ ನಾನು — ಎಲೋ ಸ್ನೇಹಿತರೇ, ಒಬ್ಬನು ದುಡಿಯುತ್ತಾ ತನ್ನ ಕುಟುಂಬವನ್ನು ಸಾಗಿಸಿ ಕೊಂಡು ಹೋಗುವದೋ? ಅಥವಾ ಹಾಳಾಗಿ ಹೋಗುವದೋ? ಈ ಎರಡರಲ್ಲಿ ಯಾವದು ಲಘು ಆಗುವ ಹಾಗುಂಟು? ಎಂಬ ಪ್ರಶ್ನೆ ಮಾಡಿದೆನು. ಅದಕ್ಕೆ ಅವರು, ಹಾಳಾಗಿ ಹೋಗುವ ಗಂಡಾಂತರವೇ ಬೇಗನೇ ತಟ್ಟಬಹುದು, ಅಂದರು. ನಾನು ಅದಕ್ಕೆ ಒಪ್ಪಿ ಕೊಳ್ಳದೆ ಅವರಿಗೆ ಹೇಳಿದ್ದೇನಂದರೆ — ನೀವು ಹೇಳಿದ ಮಾತು ಸುಳ್ಳು; ಯಾಕಂದರೆ ನಮ್ಮ ಮಕ್ಕಳಲ್ಲಿ ಒಬ್ಬನು ಹಾಳಾಗಿ ಹೋಗುವ ಹಾಗಿದ್ದರೆ ನಾವು ಅವನಿಗೆ ಸಹಾಯ ಮಾಡದೆ ಇದ್ದೇವೋ? ಒಂದು ವೇಳೆ ನಾವು ಸಹಾಯ ಮಾಡದೆ ಇರ ಬೇಕಾದರೆ ಆ ಮಗನು ನ

ಮ್ಮ ವೈರಿಯಾಗಿ ನಿಂತಿರ ಬೇಕು; ಆದರೆ ಮನುಷ್ಯರಾದ ನಮ್ಮಲ್ಲಿ ಇಂಥಾ ಮನಸ್ಸಿದ್ದರೆ, ಕರುಣೆಯುಳ್ಳ ದೇವರಲ್ಲಿ ಇನ್ನು ಎಷ್ಟು ಅಧಿಕವಿರ ಬೇಕು? ಆತನು ಒಬ್ಬನನ್ನು ಕೈಬಿಡ ಬೇಕಾದರೆ ಅವನು ಆತನಿಗೆ ಪೂರ್ಣ ವೈರಿಯಾಗಿರ ಬೇಕು; ಆದಕಾರಣ ನೀವು ಹಾಳಾಗಿ ಹೋದೇವೆಂಬ ಈ ವ್ಯರ್ಥ ಚಿಂತೆಯನ್ನು ಬಿಟ್ಟು, ತಂದೆಯಾದ ದೇವರ ಸತ್ಯ ಮಕ್ಕಳಾಗುವದಕ್ಕೆ ಮಾತ್ರ ಚಿಂತಿಸಿರಿ; ಆತನು ನಿಮ್ಮ ತಂದೆಯಾಗಿರುವ ತನಕ ನೀವು ಅರಿವಿಹರಕರಾಗಿ ಹಾಳಾಗಲಾರಿರಿ. ಆದರೂ ನೀವು ಸಂಸಾರದ ಚಿಂತೆ ಅಗದಿ ಹಚ್ಚಿ ಕೊಳ್ಳದೆ, ನಿಶ್ಚಿಂತರಾಗಿರ ಬೇಕೆಂಬುವದು ನನ್ನ ಮಾತಲ್ಲ. ಅಂಥಾ ನಿಶ್ಚಿಂತರ ತರ ಬೇರೆ, ಅವರ ಮನೆಯ ಮಾತು ಏನಂದರೆ: ತಿನ್ನುವದಕ್ಕೆ ಇರುವ ತನಕ ತಿಂಬೋಣ! ನಮ್ಮದು ತೀರಿದ ಮೇಲೆ ಮತ್ತ್ಯಾವನಲ್ಲಿಯಾದರೂ ಇನ್ನೂ ಸಿಕ್ಕೀತು ಅಂತಂದು, ತಮ್ಮ ಮನೆಯಲ್ಲಿ ಇರುವದೆಲ್ಲಾ ತೀರುವ ಪರಿಯಂತರ ಸ್ವತಹಾ ಕೆಲಸ ಮಾಡದೆ, ಮುಂಜಾನೆಯಿಂದ ಸಂಜೆಯ ತನಕ ಕೂಳಿನಲ್ಲಿಯೇ ಇರುವರು. ತಮಗಿದ್ದದ್ದೆಲ್ಲಾ ನುರಿದ ಮೇಲೆ ಬೇರೊಬ್ಬರ ಅಂಗಳಕ್ಕೆ ನಾಚಿಕೆ ಇಲ್ಲದೆ ಹೋಗಿ, ಅವರನ್ನು ಕಾಡಿ, ಏನಾದರೂ ಇಸ ಕೊಂಡು ಬರುವರು. ಇಂಥಾ ಆ ಬುರುಗೇಡಿಗಳಾದ ದುಂದುಗಾರರನ್ನು ನೀವು ಕಂಡರೆ ಅವರನ್ನು ಬಿಟ್ಟು, ದೂರ ಹಾಯಿರಿ; ಯಾಕಂದರೆ ನಮ್ಮ ಕರ್ತನು ತಮ್ಮ ಸಂಸಾರವನ್ನು ವಿವೇಕದಿಂದ ಸಾಗಿಸುವ ಸೇವಕರನ್ನು ಮಾ

ತ್ರ ಪ್ರೀತಿ ಮಾಡಿ, ಅವರೇ ತಮ್ಮ ಕೈಗಳನ್ನು ಮೇಲಕ್ಕೆ ಎತ್ತಿ, ದಾನ ಕೊಡುವ ಹಾಗೆ ಆಶೀರ್ವದಿಸುತ್ತಾನೆ.

೬ನೇ ಕ್ರಮವು.

ಐಶ್ವರ್ಯವಂತರು ತಮ್ಮ ಮನೆತನವನ್ನು ನಡಿಸುವದಕ್ಕಿಂತ ಸಾಧಾರಣವಾದವರು ಅದನ್ನು ನಡಿಸುವದು ಬಹಳ ಸುಲಭ; ಯಾಕಂದರೆ ಐಶ್ವರ್ಯವಂತರಿಗೆ ಬಡವರಿಗಿಂತ ಹೆಚ್ಚು ಚಿಂತೆಗಳವೆ. ನಮ್ಮ ಜಿಂದಿಗಿ ಎಷ್ಟು ಹೆಚ್ಚುವದೋ, ಅಷ್ಟು ಅದನ್ನು ಕಾಯ ಬೇಕೆಂಬ ಚಿಂತೆಯು ಸಹಾ ಹೆಚ್ಚಾಗುವದು. ಇಷ್ಟೇ ಮಾತ್ರವಲ್ಲದೆ, ಇದ್ದದ್ದನ್ನು ಇನ್ನೂ ಹೆಚ್ಚಿಸ ಬೇಕೆಂಬ ಆಶೆಯು ಸಹಾ ನಮ್ಮಲ್ಲಿ ಹುಟ್ಟುತ್ತದೆ. ಒಬ್ಬ ಸ್ತ್ರೀಗೆ ೧೦೦ ಕೋಳಿಗಳಿದ್ದರೆ ಅವುಗಳಲ್ಲಿ ಒಂದಾದರೂ ಕಳೆದು ಹೋಗದ ಹಾಗೆಯೂ ತತ್ತಿಗಳಿಗೆ ನಷ್ಟವಾಗದ ಹಾಗೆಯೂ ಅವಳು ಬಹಳ ಜಾಗ್ರತೆಯಿಂದ ಇರ ಬೇಕಲ್ಲಾ? ಹಾಗೆಯೇ ಐಶ್ವರ್ಯವಂತನು ತಾನು ಬಡ್ಡಿಗೆ ಕೊಟ್ಟ ಹಣದ ಸಲುವಾಗಿಯೂ ಮನೆಯ ಎಲ್ಲಾ ಮಾಲಿನ ಸಲುವಾಗಿಯೂ ಚಿಂತಿಸ ಬೇಕಾಗುತ್ತದೆ. ಇದಲ್ಲದೆ ಸಾಲ ತಕ್ಕೊಂಡವನು ದರಿದ್ರನಾದರೆ ಅದನ್ನು ಯಾವ ರೀತಿಯಿಂದ ಸಲ್ಲಾಸುವನು ಎಂಬ ಈ ತರದ ನಾನಾ ಚಿಂತೆಗಳನ್ನು ಹೊತ್ತುಕೊಳ್ಳ ಬೇಕಾಗುತ್ತದೆ. ಆದರೆ ಸಾಧಾರಣವಾದವರಿಗೆ ಅಷ್ಟು

ಜಿಂದಿಗಿ ಇಲ್ಲದೆ, ಆ ಮೊದಲಾದ ಚಿಂತೆಗಳು ಅವರಿಗೆ ಹತ್ತದೆ ಇರುವದರಿಂದ ಅವರ ಕಾಲಕ್ಷೇಪವು ಐಶ್ವರ್ಯವಂತರಿಗಿಂತಲು ಬಹು ಸುಲಭವಾಗಿ ನಡಿಯುತ್ತದೆ.

೭ನೇ ಕ್ರಮವು.

ಬಹಳವಾಗಿ ಮನುಷ್ಯರು ತಮಗೆ ಐಶ್ವರ್ಯವು ಇದ್ದದ್ದಾದರೆ ಮಾತ್ರ ತಮಗೆ ಸಮಾಧಾನವು ದೊರಕೀತೆಂದು ನೆನಸುವರು. ಆದರೆ ಈ ಲೋಕಸ್ಥಿತಿಗಳಾದ ಬಡತನವಾದರೂ ಐಶ್ವರ್ಯವಾದರೂ ನಮಗೆ ಸಮಾಧಾನವನ್ನು ಕೊಡಲಾರದು; ಯಾಕಂದರೆ ಸಮಾಧಾನವು ನಾನಾ ತರದ ಚಿಂತೆಗಳಿಂದ ಗಲಿಬಿಲಿಯಾಗದ ಮನಸುಳ್ಳವರಿಗೆ ಮಾತ್ರ ದೊರಕುತ್ತದೆ; ಆದರೆ ನಾವು ದಿನ ದಿನ ನೋಡುವ ಪ್ರಕಾರ ಬಹು ಚಿಂತೆಗಳಿಂದ ತುಂಬಿದವರಾಗಿ ವಿಶ್ರಾಂತಿ ಇಲ್ಲದೆ ತಿರುಗುವ ಐಶ್ವರ್ಯವಂತರಿಗಿಂತ ಸ್ವಲ್ಪದರೊಳಗೆ ಸಂತೋಷವಾಗಿರುವ ಸಾಧಾರಣವಾದ ಬಡವರು ಹೆಚ್ಚು ಸಮಾಧಾನದಿಂದಿದ್ದಾರೆ. ಯಾಕಂದರೆ ಐಶ್ವರ್ಯವಂತರಷ್ಟು ಕರಕರೆ ಚಿಂತೆಗಳು ಅವರಿಗಿಲ್ಲವು. ಆದರೆ ಬಹುತೇಕ ಜನರು ಇದನ್ನು ಮನಸ್ಸಿಗೆ ತಾರದೆ, ಈ ಲೋಕದಲ್ಲಿ ಮಾನ ಮಹಿಮೆಯನ್ನು ಹೊಂದ ಬೇಕೆಂದು ಐಶ್ವರ್ಯವಂತರ ಸಂಗಡ ನೆಂಟಸ್ತಿಕೆ ಮೊದಲಾದದ್ದನ್ನು ಮಾಡಲಿಕ್ಕೆ ಇಚ್ಛೈಸಿ, ತಮಗೆ ತಾವೇ ದೊ

ಡ್ಡ ಮೋಸವನ್ನು ಮಾಡಿ ಕೊಳ್ಳುತ್ತಾರೆ. ಯಾಕಂದರೆ ದೇವರ ವಾಕ್ಯದೊಳಗೆ—ಈ ಲೋಕದಲ್ಲಿ ಅಲ್ಲ, ಪರಲೋಕದಲ್ಲಿ ನಿಮಗೆ ದ್ರವ್ಯಗಳನ್ನು ಇಟ್ಟು ಕೊಳ್ಳಿರಿ; ಒಂದು ವೇಳೆ ನಿಮಗೆ ಈ ಲೋಕದಲ್ಲಿ ಐಶ್ವರ್ಯವಿದ್ದರೂ ಅದರ ಮೇಲೆ ನಿಮ್ಮ ಮನಸ್ಸನ್ನು ಇಡದೆ, ಇಲ್ಲದವರ ಹಾಗೆ ನಡಿಯ ಕಲಿತು ಕೊಳ್ಳಿರಿ ಎಂದು ಹೇಳಿ ಅದೆ. ಆ ಐಶ್ವರ್ಯವಂತನು (ಲೂಕ. ೧೬, ೧೯.) ರಕ್ತಾಂಬರವನ್ನೂ ನಾರುಮಡಿಯನ್ನೂ ಹೊದ್ದು ಕೊಂಡು, ದಿನ ದಿನ ಸಂಭ್ರಮದಲ್ಲಿರುವದರ ಹೊರ್ತು ಮತ್ತೇನೂ ಹುಡುಕದೆ ಇದ್ದ ಕಾರಣ ನರಕದೊಳಗೆ ಬಿದ್ದನು. ಹೀಗಿರುವದರಿಂದ ನಾವು ಅವನಂತೆ ಈ ಲೋಕದ ಹೊನ್ನು ಹೆಣ್ಣು ಮಣ್ಣಿನ ಮೇಲೆ ಭರವಸವನ್ನಿಟ್ಟು, ಅದನ್ನೇ ಮಾತ್ರ ಹುಡುಕಿದವರಾದರೆ ನಾವೂ ನಾಶನವಾಗುವೆವು. ಈ ಲೋಕದ ಸಂಪತ್ತನ್ನು ಹುಡುಕುವವನು ತನಗೆ ನರಕವನ್ನು ಹುಡುಕಿ ಕೊಂಡ ಹಾಗಾಯಿತು. ಹೀಗಿರುವದರಿಂದ ಸಂಪತ್ತು ಉಂಟಾದ ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಶೇರುವದಕ್ಕಿಂತ ಒಂಟೆಯು ಸೂಜಿಯ ರಂಧ್ರದಲ್ಲಿ ತೂರುವದು ಸುಲಭವಾಗಿದೆ ಎಂದು ಕರ್ತನಾದ ಯೇಸುವು ಹೇಳಿದ ಮಾತನ್ನು ಮನಸ್ಸಿಗೆ ತರ ತಕ್ಕದ್ದು.

೮ನೇ ಕ್ರಮವು.

ಅನ್ಯಾಯದ ಬದುಕು ಮೊಮ್ಮಕ್ಕಳ ತನಕ ಉಳಿಯುವದಿಲ್ಲ.

ನಾನು ಸಾಲ ಕೊಡುವದರಿಂದ ಬಹಳ ನಷ್ಟ ಪಡುತ್ತಿರುವದನ್ನು ಕಂಡು, ನನ್ನ ಸ್ನೇಹಿತರಲ್ಲಿ ಕೆಲವರು ನನಗೆ ಶಿಟ್ಟು ಮಾಡಿ, ನೀವು ಸುಮ್ಮನೇ ನಿಮ್ಮ ಹಣವನ್ನು ಜಾಗ್ರತೆ ಇಲ್ಲದೆ ಯಾಕೆ ಹೀಗೆ ಕೊಟ್ಟು, ಹಾಳು ಮಾಡುತ್ತೀರಿ? ಅಂದರು. ಅದಕ್ಕೆ ನಾನು ಅಂದದ್ದು: ಅನ್ಯಾಯದಿಂದ ಆಗುವ ಆಸ್ತಿಯ ಕೊಳ್ಳೆಗೆ ಸಂತೋಷದಿಂದ ಒಪ್ಪಿ ಕೊಳ್ಳುವದು (ಇಬ್ರಿ. ೧೦, ೩೪.) ಕಠಿಣವೇ ಸರಿ. ಆದರೆ ಒಬ್ಬನು ತನ್ನ ಬದುಕಿನಲ್ಲಿ ನಷ್ಟವಾಗುವದನ್ನು ಕಂಡರೆ ಅದರ ಕಾರಣವೇನೆಂದು ಅವನು ಪರೀಕ್ಷಿಸಬೇಕು. ಸಾಲಗಾರರು ದಿವಾಳಿ ತೆಗದು, ನನ್ನ ಐವಜನ್ನು ಮುಣುಗಿಸಿ ಬಿಟ್ಟದರಿಂದ ಆರಂಭದಲ್ಲಿ ನನಗೆ ಸ್ವಲ್ಪ ಚಿಂತೆಯಾಯಿತು. ಮತ್ತು ಹೀಗೆ ಆಗುವದರ ಕಾರಣವೇನಾದೀತೆಂದು ನಾನು ಪರೀಕ್ಷಿಸುವಾಗ ಅಗೋ ಅದು ಅನ್ಯಾಯದಿಂದ ಗಳಿಸಿದ್ದ ವಂಶಕನಿಂದ ನನಗೆ ಬಾಧ್ಯವಾಗಿ ಬಂದಂಥಾ ಬದುಕಾಗಿತ್ತು. ಇದನ್ನು ನಾನು ತಿಳುಕೊಂಡ ಮೇಲೆ ಹೀಗೆ ನಷ್ಟವಾದದರ ಸಲುವಾಗಿ ಆಶ್ಚರ್ಯ ಪಡಲಿಲ್ಲವು. ಯಾಕಂದರೆ ಹೀಗೆ ಅನ್ಯಾಯದಿಂದ ಗಳಿಸಿದ ಬದುಕಿನಲ್ಲಿ ದೇವರ ಆಶೀರ್ವಾದವಿಲ್ಲದೆ ಇರುವದರಿಂದ

ಇನ್ನೂ ಉಳಿದದ್ದು ಸಹಾ ಹೋಗುವದೇ ಸೈಯೆಂದು ನಿಶ್ಚೈಸಿ ಕೊಂಡೆನು.

೮ನೇ ಕ್ರಮವು.

ನಮ್ಮ ಸ್ಥಿತಿಯಲ್ಲಿ ನಾವು ಸಮಾಧಾನದಿಂದ ಇರ ಬೇಕಾದರೆ ನಮಗಿಂತ ಘನಸ್ತರ ಮೇಲೆ ನೋಡದೆ, ನಮಗಿಂತ ಕಷ್ಟದಿಂದ ಜೀವನ ಮಾಡುವವರನ್ನು ನೆನಪು ಮಾಡಿ ಕೊಳ್ಳ ಬೇಕು.

ಒಂದು ದಿವಸದಲ್ಲಿ ಒಬ್ಬ ಸ್ತ್ರೀಯು ನನ್ನ ಬಳಿಗೆ ಬಂದು, ತನಗೆ ಸ್ವಲ್ಪ ಹಣವನ್ನು ಸಾಲ ಕೊಡ ಬೇಕೆಂದು ಬೇಡಿ ಕೊಂಡಳು. ಅದಕ್ಕೆ ನಾನು — ಅವ್ವಾ, ನನ್ನ ಹತ್ತರ ಏನೂ ಇಲ್ಲ; ಇದ್ದರೂ ಕೊಡುವಂಥಾದ್ದು ಇಲ್ಲ; ಯಾಕಂದರೆ ಮುಂಚೆ ನನ್ನಿಂದ ಇಸ ಕೊಂಡವರು ದಿವಾಳಿ ತೆಗದದರಿಂದ ನನಗೆ ಎಂಟು ಸಾರಿ ನಷ್ಟವಾಯಿತು ಅಂದೆನು. ಅದಕ್ಕವಳು — ನಾನು ಬಡ ಸ್ತ್ರೀಯು, ದೇವರೇ ನನಗೆ ಇಂಥಾ ಬಡತನವನ್ನು ಕೊಟ್ಟನು, ಆದರೂ ನಾನು ಅದನ್ನು ಸಮಾಧಾನದಿಂದ ತಾಳಿ ಕೊಳ್ಳುತ್ತಾ ಬಂದೆನು; ನಿಮಗೂ ಈಗ ಕನಿಷ್ಟ ಕಾಲವು ಬಂದು, ಎಲ್ಲಾ ನೆಟ್ಟಗೆ ಸಾಗದೆ ಇರುವದರಿಂದ ಆಶ್ಚರ್ಯ ಪಡದೆ, ನೀವೂ ಸಮಾಧಾನದಿಂದ ತಾಳಿ ಕೊಳ್ಳ ತಕ್ಕದ್ದು ಅಂದಳು. ಅವಳು ಹೇಳಿದ ಈ

ಮಾತನ್ನು ನಾನು ಆಲೋಚಿಸಿ ನೋಡುವಾಗ ಅದು ತಕ್ಕಂಥಾ
ಬೋಧನೆ ಎಂದು ತಿಳುಕೊಂಡೆನು. ಆದರೆ ಇಂಥಾ ತಾಳ್ಮೆಯು
ನಮ್ಮಲ್ಲಿ ಹುಟ್ಟದ ಕಾರಣವೇನಂದರೆ: ನಾವು ಯಾವಾಗಲೂ
ನಮಗಿಂತ ಐಶ್ವರ್ಯವಂತರಾದ ಘನಸ್ಥರ ಕಡೆಗೆ ನೋಡುವದ
ರಿಂದ ದೇವರು ಯಾಕೆ ನಮ್ಮನ್ನು ಅವರಂತೆ ಸುಖದಿಂದ ಇಡವ
ಲ್ಲನು? ಎಂಬ ಯೋಚನೆಗಳು ಹುಟ್ಟುತ್ತವೆ. ಇದರಿಂದಲೇ ನ
ಮಗೆ ಇದ್ದದ್ದು ಸಾಕೆಂದು ಎಣಿಸುವಂಥಾ ಮನಸ್ಸು ಬರವಲ್ಲ
ದು. ಆದಕಾರಣ ಗೋಪುರದ ಮೇಲಿರುವ ಕಲಶದ ಮೇಲೆ ನ
ಮ್ಮ ಮನಸ್ಸನ್ನು ಇಡ ಬಾರದು; ಯಾಕಂದರೆ ಅಲ್ಲಿಗೆ ನಾವು
ಏರಲಾರೆವು, ಏರಿದರೂ ಕೆಳಗೆ ಬೀಳುವಂಥಾ ಗಂಡಾಂತರದಲ್ಲಿ
ರುವೆವು. ಆದದರಿಂದ ನಾವು ಸುಮ್ಮನೆ ಕೆಳಗೆ ನೋಡಿ ಕೊಂಡಿರು
ವದೇ ಒಳ್ಳೇದು. ಏನಂದರೆ ನಮ್ಮ ಸ್ಥಿತಿಯಲ್ಲಿ ನಮಗೆ ಸಮಾ
ಧಾನ ಇರುವ ಹಾಗೆ ನಾವು ಘನಸ್ಥರನ್ನು ಅಲ್ಲ, ನಮಗಿಂತ ಕ
ಷ್ಟದಿಂದ ಜೀವನ ಮಾಡುವವರನ್ನು ನೆನಪು ಮಾಡಿ ಕೊಳ್ಳ ಬೇ
ಕು. ಒಂದು ದಿವಸದಲ್ಲಿ ಐಶ್ವರ್ಯವಂತನಾದ ಒಬ್ಬ ಸ್ನೇಹಿತ
ನು ತನ್ನ ರಮ್ಯವಾದ ತೋಟಕ್ಕೆ ನನ್ನನ್ನು ಕರಕೊಂಡು ಹೋಗಿ,
ಎಲ್ಲವನ್ನು ತೋರಿಸಿದ ಮೇಲೆ ಇದರಲ್ಲಿ ನಿಮಗೆ ಸಂತೋಷ
ಕಾಣಿಸಿತೋ? ಎಂದು ಕೇಳಿದನು. ಅದಕ್ಕೆ ನಾನು ಹೇಳಿದ್ದೇ
ನಂದರೆ: ನನಗೆ ದೊರಕಲಾರದಂಥಾ ವಸ್ತುಗಳಲ್ಲಿ ಸಂತೋಷ
ಪಡ ಬಾರದೆಂಬ ನೇಮವನ್ನು ಮಾಡಿ ಕೊಂಡಿದ್ದೇನೆ, ಯಾ

ಕಂದರೆ ಅಂಥವುಗಳಲ್ಲಿ ಸಂತೋಷ ಪಟ್ಟರೆ ಸಂಗಡಲೇ ಅವುಗಳು ನನಗೆ ಇರ ಬೇಕೆಂಬ ಆಶೆಯು ಹುಟ್ಟುವದು. ಆದದರಿಂದ ನಾನು ನಿಮ್ಮವುಗಳಲ್ಲಿ ಸಂತೋಷ ಪಟ್ಟರೆ ನಾನು ಎಂಥಾ ಮೂಢನಾಗಿರ ಬೇಕು? ಅಂದೆನು.

೧೦ನೇ ಕ್ರಮವು.

ಮನೆತನವು ಚಲೋ ಕ್ರಮದಲ್ಲಿರ ಬೇಕಾದರೆ ಒಳ್ಳೇ ಗುಣವಂತ ಸೇವಕರು ಇರ ಬೇಕು.

ಅನೇಕರು ನನ್ನ ಬಳಿಗೆ ಬಂದು, ತಮ್ಮ ಸೇವಕರು ಕೆಟ್ಟವರೆಂದು ನನಗೆ ಬಹಳವಾಗಿ ಹೇಳುತ್ತಿದ್ದರು. ಅದಕ್ಕೆ ನಾನು ಅದು ಆಶ್ಚರ್ಯವಲ್ಲವೆಂತ ಹೇಳುತ್ತಿದ್ದೆನು; ಯಾಕಂದರೆ ನೀವು ಒಂದು ಎತ್ತು ಇಲ್ಲವೇ ಕುದುರೆಯನ್ನು ಕ್ರಯಕ್ಕೆ ತೆಗದು ಕೊಳ್ಳ ಬೇಕಾಗಿದ್ದರೆ ಅದು ಯಾವ ತರದ್ದು ಎಂದು ಚನ್ನಾಗಿ ಪರೀಕ್ಷೆ ಮಾಡುತ್ತೀರಿ. ಆದರೆ ನೀವು ಚಾಕರಿಯವರನ್ನು ಇಟ್ಟು ಕೊಳ್ಳ ಬೇಕಾದರೆ ಅವರು ಎಂಥವರು? ಅವರ ಗುಣಗಳು ಹ್ಯಾಗೆ? ಎಂಬುವದನ್ನು ವಿಚಾರಿಸದೆ ಅಜಾಗ್ರತರಾಗಿರುತ್ತೀರಿ. ಆದರೆ ಇನ್ನು ಮುಂದೆ ನಿಮಗೆ ಒಬ್ಬ ಚಾಕರನು ಬೇಕಾದರೆ ಅವನು ಕೆಲಸದಲ್ಲಿ ಹುಶಾರಿಯಾಗಿರುವನೋ? ಎಂಬದನ್ನು ಮುಖ್ಯವಾಗಿ

ನೋಡದೆ, ಅವನು ಸತ್ಯವಂತನೋ? ಅಥವಾ ಸುಮಾರಿನವ ನೋ? ಎಂಬುವದನ್ನೇ ನೀವು ಮುಖ್ಯವಾಗಿ ಪರೀಕ್ಷಿಸ ಬೇಕು; ಯಾಕಂದರೆ ಅರಸನಾದ ಸೊಲೊಮೋನನು — ನನ್ನ ಕೆಲಸಕ್ಕೆ ದೇಶದಲ್ಲಿರುವ ಸತ್ಯವಂತರನ್ನು ಹುಡುಕಿದೆನೆಂದು ಹೇಳುತ್ತಾನೆ. ಮತ್ತು ದೇವರಿಗೆ ಭಯ ಪಡುವ ಒಳ್ಳೇ ಸೇವಕರಿಂದ ಯಜಮಾನನ ಮನೆಯ ಮೇಲೆ ಎಷ್ಟು ದೊಡ್ಡ ಆಶೀರ್ವಾದ ಬರುತ್ತದೆಂದು ಯೋಸೆಫನ ಚರಿತ್ರೆಯಲ್ಲಿ ಚಂದಾಗಿ ಪ್ರತ್ಯಕ್ಷವಾಗಿದೆ.

ಆದರೆ ಯೋಗ್ಯವಾದ ಸೇವಕರು ಬೇಕಾದರೆ ಅವರಿಗೆ ಪ್ರಯೋಜನವಾದ ಕೆಲಸವನ್ನು ಸಹಾ ಕೊಡ ಬೇಕು; ಯಾಕಂದರೆ ಒಳ್ಳೇ ಚಾಕರನು ತನ್ನ ಕೆಲಸದಿಂದುಂಟಾಗುವ ಪ್ರಯೋಜನವನ್ನು ನೋಡಲಾಶಿಸುತ್ತಾನೆ; ಮತ್ತು ಅದನ್ನು ನೋಡಿದರೆ ಸಂತೋಷವಾಗುತ್ತಾನೆ; ಆದರೆ ನೋಡದಿದ್ದರೆ ಬೇಸರವಾಗಿ, ಅಂಥಾ ಕೆಲಸವನ್ನು ಬಿಡ ಬೇಕೆಂಬ ಮನಸ್ಸು ಮಾಡುವನು. ಒಬ್ಬನು ತನ್ನ ಕೆಲಸವು ಏನೂ ಫಲವಿಲ್ಲದ್ದೂ ನಿಷ್ಪ್ರಯೋಜನವಾದದ್ದೂ ಎಂದು ತಿಳಿದಾಗ್ಯೂ ಏನೂ ವಿಚಾರ ಮಾಡದೆ, ತನಗೆ ಸಿಕ್ಕುವಂಥಾ ಲಾಭ ಸಂಬಳದ ಮೇಲೆ ಮಾತ್ರ ಮನಸ್ಸಿಟ್ಟು, ಅದನ್ನು ಮಾಡುತ್ತಾ ಇದ್ದರೆ ಅವನು ಬಹು ಸುಮಾರಿನವನೆಂದು ತಿಳಿಯ ಬೇಕು. ಅವನು ಅಂಥಾ ವ್ಯರ್ಥವಾದ ಕೆಲಸದಲ್ಲಿ ಕೆಲವು ವರ್ಷ ತನಕ ನಿಂತರೆ ಅವನ ಬುದ್ಧಿ ಎಲ್ಲಾ ಮಂದವಾಗಿ, ಮುಂದೆ ಅವನು ಯಾವ ಕೆಲಸಕ್ಕೂ ಬಾರದವನಾಗುತ್ತಾನೆ.

ಒಂದು ದಿವಸದಲ್ಲಿ ಒಬ್ಬ ಸೇವಕನು ನನ್ನ ಬಳಿಗೆ ಬಂದು, ತನ್ನನ್ನು ಕೆಲಸಕ್ಕೆ ಇಟ್ಟು ಕೊಳ್ಳ ಬೇಕೆಂದು ಬೇಡಿ ಕೊಂಡನು. ಆಗ ನಾನು ಅವನನ್ನು ಪರೀಕ್ಷಿಸುವದಕ್ಕಾಗಿ ನನ್ನ ಮಾಳಿಗೆಯ ಮೇಲೆ ಹದಿನೈದು ಸರ್ತಿ ಹತ್ತಿ ಇಳಿ, ಅಂದರೆ ಹತ್ತಿ ಇಳಿದೀಯಾ? ಅಂದೆನು. ಅದಕ್ಕವನು ಅಡ್ಡಿ ಏನೆಂದು ಉತ್ತರ ಕೊಟ್ಟನು. ನಾನು ಅವನಿಗೆ — ನೀನು ಸಂಬಳಕ್ಕೆ ಮಾತ್ರ ಚಿಂತಿಸುವವನಾಗಿ, ಪ್ರಯೋಜನವಿಲ್ಲದ ಕೆಲಸವನ್ನು ಮಾಡುವದಕ್ಕೆ ಒಪ್ಪಿ ಕೊಳ್ಳುವದರಿಂದ ನಿನ್ನಂಥವನು ನನಗೆ ಅವಶ್ಯವಿಲ್ಲವೆಂದು ಹೇಳಿದೆನು. ಮತ್ತೊಂದು ಸಮಯದಲ್ಲಿ ನನ್ನ ಹೊಲದ ಕೆಲಸಕ್ಕೆ ಕೂಲಿಯವರು ಬೇಕಾಗಿದ್ದರು. ಆಗ ನಾನು ಒಳ್ಳೇ ಕೂಲಿಯವರು ಯಾರೆಂದು ಪರೀಕ್ಷಿಸುವದಕ್ಕಾಗಿ ಒಂದು ಉಪಾಯವನ್ನು ಮಾಡಿದೆನು. ಅದು ಯಾವದಂದರೆ: ನನ್ನ ತೋಟದಲ್ಲಿ ಫಲ ಭರಿತವಾದ ಒಂದು ಒಳ್ಳೇ ಮಾವಿನ ಮರವಿತ್ತು. ಅದನ್ನು ನಾನು ಬಂದ ಬಂದ ಆಳುಗಳಿಗೆ ತೋರಿಸಿ, ಈ ಮರವನ್ನು ಕಡಿಯಿರಿ; ಯಾಕಂದರೆ ಅದು ನನ್ನ ತೋಟಕ್ಕೆ ನೆರಳು ಕೊಡುತ್ತದೆ, ಎಂದು ಹೇಳಿದ ಮೇಲೆ ಯಾವನು ಅದಕ್ಕೆ ಒಪ್ಪಿ ಕೊಂಡನೋ, ಅವನನ್ನು ನನ್ನ ಕೆಲಸಕ್ಕೆ ಇಟ್ಟು ಕೊಳ್ಳಲಿಲ್ಲ; ಯಾಕಂದರೆ ಅವನು ಬರೇ ಸಂಬಳಕ್ಕಾಗಿ ಮಾತ್ರವೇ ಕೆಲಸ ಮಾಡುವವನಾಗಿದ್ದನು. ಆದರೆ ಅವರಲ್ಲಿ ಮತ್ತೊಬ್ಬನು ನನ್ನ ಮಾತಿಗೆ ಆಶ್ಚರ್ಯ ಪಟ್ಟು, ಓ ಇಂಥಾ ಮರವನ್ನು ಕಡಿಯುವದು ದೋಷವೂ ದೊಡ್ಡ ನಷ್ಟವೂ ಆಗಿರುವದರಿಂದ

ನಾನು ಅದನ್ನು ಕಡಿಯ ಭಯ ಪಡುತ್ತೇನೆ, ಎಂದು ಹೇಳಿದದರಿಂದ ಅವನು ನಿಜವೂ ಘನವೂ ಉಳ್ಳ ಆಳೆಂದು ನಾನು ತಿಳುಕೊಂಡು, ಅವನನ್ನು ನನ್ನ ಕೆಲಸಕ್ಕೆ ಇಟ್ಟು ಕೊಂಡೆನು.

೧೧ನೇ ಕ್ರಮವು.

ಪ್ರಪಂಚವು ನೆಟ್ಟಗೆ ಸಾಗ ಬೇಕಾದರೆ ಪತಿ, ಪತ್ನಿ ವ್ರತರಾಗಿರ ತಕ್ಕದ್ದು.

ಬಹಳ ಜನರು ಸಂಸಾರದಲ್ಲಿ ತಮಗೆ ಹತ್ತುವ ಕಷ್ಟ ನಷ್ಟಗಳನ್ನು ನೋಡಿ, ಇನ್ನು ಮುಂದೆ ತಾವು ಬೇಗನೆ ದರಿದ್ರರಾಗಿ, ಹಾಳಾಗಿ ಹೋದೇವೆಂಬ ಭಯದಲ್ಲಿ ಇರುತ್ತಾರೆ. ಆದರೆ ಗಂಡ ಹೆಂಡತಿ ವ್ಯಭಿಚಾರಸ್ತರಾಗಿರದೆ, ಒಬ್ಬರಿಗೊಬ್ಬರು ವ್ರತರಾಗಿದ್ದರೆ ಇಂಥವರ ಸಂಸಾರವು ಹಾಳಾಗಿ ಹೋಗುವದು ಬಹು ಅಪರೂಪವು. ಆದರೆ ಒಬ್ಬನಿಗೆ ಎಷ್ಟು ಐಶ್ವರ್ಯವಿದ್ದರೂ ಗಂಡನಾಗಲಿ ಹೆಂಡತಿಯಾಗಲಿ ವ್ಯಭಿಚಾರ ಮಾಡಿ, ತಮ್ಮ ವ್ರತಾಧರ್ಮವನ್ನು ಕೆಡಿಸಿ ಕೊಂಡರೆ ಆ ಎಲ್ಲಾ ಐಶ್ವರ್ಯವು ವ್ಯರ್ಥವೇ; ಯಾಕಂದರೆ ದೇವರು ಮದುವೆಯ ಸ್ಥಿತಿಯ ಮೇಲೆ ಇಟ್ಟಂಥಾ ಆಶೀರ್ವಾದವು ಜಾರರ ಮನೆಯಲ್ಲಿರದು. ಒಬ್ಬನು ದಿವಾಳಿಯಾದರೆ ಅದಕ್ಕೆ ಅನೇಕ ಕಾರಣಗಳನ್ನು ಹೇಳ ಬಹುದು;

ಏನಂದರೆ: ಅವನು ಮನೆತನವನ್ನು ಕ್ರಮದಿಂದ ನಡಿಸ ಶಕ್ತ ನಾಗಿದ್ದಿಲ್ಲ; ಇಲ್ಲವೆ ಬೇರೆ ಬೇರೆ ಜನರಿಂದ ಅವನಿಗೆ ಮೋಸವಾಯಿತು ಎಂಬುವ ಈ ಮೊದಲಾದವುಗಳೇ. ಆದರೆ ನಾನು ಆ ಕಾರಣಗಳನ್ನು ನಂಬದೆ, ಗಂಡ ಹೆಂಡತಿಯರು ತಮ್ಮ ತಮ್ಮೊಳಗೆ ಪತಿ ಪತ್ನಿ ವ್ರತರಾಗಿದ್ದಾರೋ? ಎಂದು ಸಂಗಡಲೇ ಕೇಳುತ್ತೇನೆ; ಯಾಕಂದರೆ ಅವರು ತಮ್ಮ ತಮ್ಮೊಳಗೆ ಪತಿ ಪತ್ನಿ ವ್ರತರಾಗಿಲ್ಲದಿರುವದರಿಂದಲೇ ಅವರ ಮನೆತನವು ಹಾಳಾಗಿ ಹೋಗುತ್ತದೆ.

೧೨ನೇ ಕ್ರಮವು.

ವಾದಿಸುವದರಿಂದಲ್ಲ ತಾಳ್ಮೆಯಿಂದಲೇ ಗಂಡ ಹೆಂಡರು ಒಬ್ಬರನ್ನೊಬ್ಬರು ಒಲಿಸಿ ಕೊಳ್ಳುವರು.

ಒಂದಾನೊಂದು ದಿವಸದಲ್ಲಿ ಕೆಲವು ಮಂದಿ ಸ್ನೇಹಿತರು ನನ್ನ ಮನೆಗೆ ಬಂದಾಗ ನಾನು ಅವರಿಗೆ— ಒಳ್ಳೇ ಯಜಮಾನನ ಲಕ್ಷಣವೇನು? ಅವನು ತನ್ನ ಸಂಸಾರದಲ್ಲಿ ಹ್ಯಾಗೆ ಕೆಲಸ ನಡಿಸುವನು ಎಂಬದನ್ನು ನೀವು ಬಲ್ಲಿರೋ? ಒಂದು ವೇಳೆ ಯಜಮಾನನು ತನಗೆ ಸರಿ ಕಂಡ ಯಾವದನ್ನಾದರೂ ಮಾಡುವಾಗ ಅದಕ್ಕೆ ಕುಟುಂಬದವರಲ್ಲಿ ಯಾರೂ ಅಡ್ಡಿ ಮಾಡದೆ,

ಪ್ರತಿ ಉತ್ತರ ಕೊಡದೆ ಇರ ಬೇಕು; ಯಾರಾದರೂ ಅಡ್ಡಿ ಮಾಡುವ ಹಾಗಿದ್ದರೆ ಯಜಮಾನನು ಒದರ್ಯಾಡಿ, ಅವರನ್ನು ಸುಮ್ಮನಿರಿಸಿ, ತನ್ನ ಚಿತ್ತವನ್ನು ಪೂರೈಸ ಬೇಕು; ಅಂಥವನೇ ಬುದ್ಧಿಯಿಂದ ತನ್ನ ಸಂಸಾರವನ್ನು ನಡಿಸುವ ಒಳ್ಳೇ ಯಜಮಾನನೆಂದು ನೀವು ನೆನಸುವಿರಿ. ಆದರೆ ಒಳ್ಳೇ ಯಜಮಾನನು ಕೆಲವು ಸಮಯದಲ್ಲಿ ಕರ್ತನಾದ ಯೇಸುವು—ನನ್ನ ಚಿತ್ತವಲ್ಲ, ನಿನ್ನದೇ ಆಗಲಿ! ಅಂದಂತೆ ಬೇರೆ ಬೇರೆ ಕಾರ್ಯಗಳೊಳಗೆ ತನ್ನ ಚಿತ್ತಕ್ಕೆ ಸ್ವಲ್ಪ ವಿರೋಧವಾದರೂ ಸೈರಿಸಿ ಕೊಳ್ಳ ಬೇಕು; ಯಾತಕ್ಕಂದರೆ ಒಬ್ಬನು ತನ್ನ ಚಿತ್ತಕ್ಕೆ ಏನೂ ಅಡ್ಡಿಯಾಗದೆ, ತನ್ನ ಕಲ್ಪನೆಯೇ ಮಾತ್ರ ಸಫಲವಾಗ ಬೇಕೆಂಬ ಹಟವನ್ನು ಹಿಡಿದರೆ ಝುಗಳ ಹುಟ್ಟುವದು. ಇದು ಬಹಳವಾಗಿ ಗಂಡ ಹೆಂಡರೊಳಗೆ ಅನೇಕಾವರ್ತಿ ಘಟಿಸುತ್ತದೆ. ಒಂದು ಯುಗಾದಿಯ ದಿವಸದಲ್ಲಿ ಗಂಡ ಹೆಂಡತಿಯರಿಬ್ಬರು ಹೊರಗೆ ನಿಂತಿರುವಾಗ ಮಾಡಿನ ಮೇಲೆ ಕೂತಿದ್ದ ಒಂದು ಪಕ್ಷಿಯನ್ನು ಕಂಡು, ಗಂಡನು ಆ ಪಕ್ಷಿಯ ಹೆಸರು ಇಂಥಾದ್ದೆಂದು ತನ್ನ ಹೆಂಡತಿಗೆ ಹೇಳಿದನು. ಆ ದಕ್ಕವಳು ಹಾಗಲ್ಲ, ಅದರ ಹೆಸರು ಬೇರೆ ಅಂದಳು. ಅವನು ಇಲ್ಲಾ, ಅದರ ಹೆಸರು ನಾ ಹೇಳಿದ್ದೇ ಇರುತ್ತದೆ ಎಂದು, ಹೀಗೆ ಅವರಿಬ್ಬರು ವಾಗ್ವಾದದಿಂದ ಝುಗಳಾಡಿ, ದೊಡ್ಡ ಹೊಡದಾಟ ಮಾಡಿದರು. ಆ ಮೇಲೆ ಮುಂದೆ ಮತ್ತೊಂದು ಯುಗಾದಿಯ ದಿವಸ ಹಿಂದಿನ ಝುಗಳವನ್ನು ನೆನಪಿಗೆ ತಂದು, ಗಂ

ಡನು ಹೆಂಡತಿಗೆ -- ನಾವು ಹೋದ ವರುಷದಲ್ಲಿ ಎಷ್ಟು ಬುದ್ಧಿ ಗೇಡಿಗಳಾಗಿದ್ದೆವು, ಯಾಕಂದರೆ ಒಂದು ಸಣ್ಣ ಮಾತಿನ ಸಲು ವಾಗಿ ಎಂಥಾ ದೊಡ್ಡ ಗುದ್ದಾಟ ಮಾಡಿದೆವಲ್ಲ! ಅಂದನು. ಹೆಂಡತಿಯು: ಹೌದು, ನನ್ನ ಪ್ರಿಯನೇ, ನಾವು ಆಗ ಮಾಡಿ ದ್ದು ಬಹು ಹುಚ್ಚು ಕೆಲಸವು, ಆದರೂ ಆ ಪಕ್ಷಿಯ ಹೆಸರು ನಾ ಹೇಳಿದ್ದೇ ಇತ್ತು, ಅಂದಳು. ಅವನು ಅಲ್ಲಾ, ನಾ ಹೇಳಿ ದ್ದೆ ಅದರ ಹೆಸರು, ಎಂದು ಹೇಳಿ, ಮತ್ತೂ ದೊಡ್ಡ ಕಲಹ ಮಾಡಿ ಕೊಂಡರು. ಹೀಗೆ ಸಣ್ಣ ಸಣ್ಣ ಮಾತುಗಳಲ್ಲಿ ತನ್ನದೇ ಖರೆ ಆಗ ಬೇಕೆಂಬ ಹಟವನ್ನು ಹಿಡಿದು, ತನ್ನ ಮನಸ್ಸಿಗೆ ಪೂ ರ್ಣ ಸರಿ ಬಾರದ್ದನ್ನು ಅಗದಿ ಸೈರಿಸದೆ, ಅದಕ್ಕೆ ವಾದಿಸುವದ ರಿಂದ ಇಂಥಾ ಝಗಳವಾಗುವದು. ಆದದರಿಂದ ಗಂಡನು ಒಂ ದು ವೇಳೆ ತಲೆಬಿರುಸನಾಗಿದ್ದರೂ ಹೆಂಡತಿಯು ಅದರ ಸಲು ವಾಗಿ ಅವನ ಸಂಗಡ ವಾದಿಸದೆ, ಅದರಿಂದ ತನಗೆ ಎಷ್ಟು ಕರ ಕರೆ ಆದರೂ ತಾಳಿ ಕೊಳ್ಳುತ್ತೇನೆಂದು ಅವನಿಗೆ ತೋರಿಸ ಬೇಕು. ಇದನ್ನು ನೋಡುವದರಿಂದ ಅವನು ಕಡೆಯಲ್ಲಿ ತನ್ನ ತಲೆಬಿರುಸು ತನಕ್ಕೆ ನಾಚಿ, ಅದನ್ನು ಬಿಟ್ಟು ಬಿಡುವನು. ಆಗ ಅವಳು ತನ್ನ ಗಂಡನನ್ನು ಸಂಪಾದಿಸಿ ಕೊಂಡಿರುವಳು. ಆದರೆ ವಾದಿಸುವದ ರಿಂದ ಅವನಿಗೆ ಸಿಟ್ಟು ಎದ್ದು, ಅವನ ಮನಸ್ಸು ಮತ್ತಷ್ಟು ಕಠಿ ಣವಾಗುತ್ತದೆ. ಒಂದು ದಿವಸದಲ್ಲಿ ಒಬ್ಬ ಸ್ತ್ರೀಯು ನನ್ನ ಬಳಿಗೆ ಬಂದು, ನನ್ನ ಗಂಡನು ಘಟಿಂಗ ಕುಡುಕರ ಸಂಗಡ ತಿರುಗಿ,

ನನಗೆ ಶೇರದೆ, ನಿತ್ಯ ಸಂಜೆಯಲ್ಲಿ ಮನೆಯೊಳಗೆ ಕಲಹ ಎಬ್ಬಿಸಿ ನನ್ನನ್ನು ಹೊಡೆಯುತ್ತಾನೆಂದು ಫಿರ್ಯಾದು ಮಾಡಿಕೊಂಡಳು. ಅದಕ್ಕೆ ನಾನು ಅವಳಿಗೆ ಹೇಳಿದ್ದೇನಂದರೆ: ನೀನು ಆ ಹಳ್ಳದ ಬಳಿಗೆ ಹೋಗಿ, ಒಂದು ನುಣುಪಾದ ಕಲ್ಲನ್ನು ಆರಿಸಿ ತಕ್ಕೊಂಡು ನಿನ್ನ ಮನೆಗೆ ಹೋಗು, ಮತ್ತು ನಿನ್ನ ಗಂಡನು ಮನೆಗೆ ಬಂದು ನಿನ್ನನ್ನು ಕೆಣಕುವಾಗಲೇ ನೀನು ಬೇಗನೆ ಆ ಕಲ್ಲನ್ನು ತಕ್ಕೊಂಡು, ಅವನಿಗೆ ತಿಳಿಯದ ಹಾಗೆ, ಅದನ್ನು ನಿನ್ನ ನಾಲಿಗೆಯ ಕೆಳಗೆ ಇಟ್ಟುಕೋ, ಆದರೆ ಅದು ಅಲುಗಾಡದ ಹಾಗೆ ಬಹು ಜಾಗ್ರತೆಯಾಗಿರು. ಹೀಗೆ ಕೆಲವು ದಿವಸ ತಪ್ಪದೆ ಸಾಧಿಸಿದರೆ ನಿನ್ನ ಗಂಡನು ನಿನಗೆ ಒಲಿಯುವನು. ಆಗ ಆ ಸ್ತ್ರೀಯು ಇದು ಒಂದು ಅಪರೂಪವಾದ ಉಪಾಯವು, ಆದರೆ ಇದರಲ್ಲಿ ಏನೂ ಕಾಣಿಸದಿದ್ದರೂ ಅದು ಒಂದು ಮಂತ್ರವಾಗಿದ್ದೀತೆಂದು ನೆನಸಿ, ನಾನು ಹೇಳಿದ ಹಾಗೆಯೇ ಹಳ್ಳದಿಂದ ಒಂದು ಕಲ್ಲನ್ನು ತಂದು, ಆ ದಿನದ ಸಂಜೆಯಲ್ಲಿ ನಾನು ಹೇಳಿದ ಪ್ರಕಾರವೇ ಮಾಡಿ, ಗಂಡನು ಕೆಣಕುವಾಗ ಅವಳು ಮುಂಚಿನಂತೆ ತನ್ನ ಬಾಯಿಯನ್ನು ಬಿಡದೆ, ನಾಲಿಗೆಯ ಕೆಳಗಿದ್ದ ಕಲ್ಲು ಅಲುಗಾಡದ ಹಾಗೆ ಎಚ್ಚರಿಕೆಯಾಗಿದ್ದಳು. ಆಗ ಗಂಡನು ಅವಳ ನಿಧಾನವನ್ನು ನೋಡಿ, ಆಶ್ಚರ್ಯ ಪಟ್ಟು, ಆ ದಿವಸ ಮನೆಯಲ್ಲಿ ಏನೂ ಬಡಿದಾಡದೆ, ಸುಮ್ಮನೆ ಮಲಗಿದನು. ೨ನೇ ೩ನೇ ದಿವಸದಲ್ಲಿ ಅವಳು ಅದೇ ಪ್ರಕಾರ ಮಾಡಿದ್ದನ್ನು ಕಂಡು, ಬಹು ಬೆರಗಾಗಿ, ತನ್ನ

ಹೆಂಡತಿಯ ಹೊಸ ಗುಣವನ್ನು ತನ್ನ ಜತೆಗಾರರಿಗೆ ತಿಳಿಸಿದನು. ಆಗ ಅವರೆಲ್ಲರು — ಆಹಾ! ನಿನ್ನ ಹೆಂಡತಿಯ ತಾಳ್ಮೆಯನ್ನು ನೋಡುವ! ಅವಳಿರುವಾಗ ನಿನ್ನ ಮನೆಯಲ್ಲಿ ಶೇರದ ನಾವೆಲ್ಲರು ಈಗ ಹೋಗಿ, ಅವಳಿಗೆ — ನಿನ್ನ ಕೈಯಿಂದಲೇ ಮೃಷ್ಟಾನ್ನವ ಮಾಡಿ, ನಮಗೆ ನೀಡು ಅನ್ನುವಾ; ಆವಾಗ ಅವಳ ತಾಳ್ಮೆ ಎಂಥಾದ್ದೋ ನೋಡೋಣ! ಎಂದು ಹೇಳಿ, ಅವನ ಮನೆಗೆ ನಡೆದರು. ಅವರೆಲ್ಲರು ಮನೆಗೆ ಮುಟ್ಟಿದ ಮೇಲೆ ಗಂಡನು ತನ್ನ ಹೆಂಡತಿಯನ್ನು ಕರೆದು, ಯಲೇ ಹೆಂಣೇ! ನೀನು ನಮಗೆ ಸಾರಾಯಿಯನ್ನು ತಂದು, ಊಟ ಮಾಡಿ, ನೀಡ ಬೇಕು, ಎಂದು ಒದರಿದನು. ಅವಳು ಈ ದುಷ್ಟ ಜನರನ್ನು ಕಂಡು, ಬಹಳ ಭಯ ಪಟ್ಟು ಮೆಲ್ಲಗೆ ಆ ಕಲ್ಲನ್ನು ತನ್ನ ನಾಲಿಗೆಯ ಕೆಳಗಿಟ್ಟು ಕೊಂಡು, ಗಂಡನು ಹೇಳಿದ ಎಲ್ಲವನ್ನು ಏನೂ ಗುಣುಗುಟ್ಟದೆ ಮಾಡಿದಳು. ಆಗ ಅವಳ ಗಂಡನ ಮನಸ್ಸು ಕರಗಿ, ತನ್ನ ಎಲ್ಲಾ ಸಂಗಡಿಗರನ್ನು ಕಳುಹಿಸಿ ಬಿಟ್ಟು, ಅಳುವದಕ್ಕೆ ಆರಂಭಿಸಿ, ಬಹಳ ನಾಚಿ ಹೆಂಡತಿಗೆ ಹೇಳಿದ್ದೇನಂದರೆ: ಓ ಪ್ರಿಯ ಭಾರ್ಯಳೇ! ನೀನು ಎಷ್ಟು ತಾಳ್ಮೆಯಾಗಿದ್ಧೀ, ನಾನು ನಿನಗೆ ಅನ್ಯಾಯವಾಗಿ ಕೊಟ್ಟ ಕಷ್ಟಗಳೆಂಥಾವು! ಅವುಗಳನ್ನು ನೀನು ಮರೆತು ಬಿಟ್ಟು ಮನ್ನಿಸಬೇಕೆಂದು ಬೇಡಿ ಕೊಂಡು, ಅಂದಿನಿಂದ ಅವನು ಕುಡುಕ ಘಟಿಂಗರ ಸಂಗತಿ ಬಿಟ್ಟು, ಬಹಳ ಸಾಧುವಾದನು. ಆ ಮೇಲೆ ಅವಳು ನನ್ನ ಬಳಿಗೆ ಬಂದು, ತನಗೆ ಆದ ವೃತ್ತಾಂತವನ್ನೆಲ್ಲಾ

ಸಂತೋಷದಿಂದ ನನಗೆ ತಿಳಿಸಿದಾಗ ನಾನು ಅವಳಿಗೆ—ನೀನು ಮೊದಲು ನಾನು ಹೇಳಿದ್ದು ಒಂದು ಮಂತ್ರವೆಂದು ನೆನಸಿದಿ, ಆದರೆ ಅದು ಮಂತ್ರವಲ್ಲ, ಅದರ ಮರ್ಮವೇನಂದರೆ: ನಾನು ನಿನಗೆ ಸುಮ್ಮನೆ ಬಾಯಿ ಮುಚ್ಚಿಕೋ ಅಂದಿದ್ದರೆ ಅದು ನಿನ್ನಿಂದ ಆಗದ ಹಾಗಿತ್ತು, ಆದರೆ ನಾನು ಈ ಯುಕ್ತಿಯನ್ನು ನಿನಗೆ ಹೇಳಿದ ಕಾರಣ ಅದು ನೀನು ಐನ ಝುಗಳದ ಹೊತ್ತಿನಲ್ಲಿ ಮಾತಾಡದ ಹಾಗೆ ನಿನ್ನನ್ನು ತಡೆಯಿತು. ಆದದರಿಂದ ಗಂಡನನ್ನು ಒಲಿಸಿ ಕೊಳ್ಳುವಂಥಾದ್ದು ಏನೆಂದು ನಿನಗೆ ಈಗ ತಿಳಿದ ಕಾರಣ, ಇನ್ನು ಮುಂದೆ ಆ ಕಲ್ಲನ್ನು ತೆಗದು, ತಾಳ್ಮೆ ಎಂಬ ಕಠಿಣ ಮನಸ್ಸನ್ನು ಕರಗಿಸುವ ಬೆಂಕಿಯನ್ನು ಧರಿಸಿಕೋ, ಎಂದು ಹೇಳಿದೆನು. ಆದರೆ ಗಂಡನು ಸಹ, ಅವನು ಹೆಂಡತಿಯ ತಲೆಯಾಗಿರುವದರಿಂದ, ಹೆಚ್ಚು ಬುದ್ಧಿವಂತನಾಗಿ, ಬೇಕಾದ ಸಮಯದಲ್ಲಿ ಜಾಣತನದಿಂದ ತಾಳಿ ಕೊಂಡು, ತನ್ನ ವಿವೇಕವನ್ನು ತೋರಿಸ ತಕ್ಕದ್ದು.

೧೩ನೇ ಕ್ರಮವು.

ಗಂಡ ಹೆಂಡರು ಬಲತ್ಕಾರದಿಂದ ಅಲ್ಲ, ಪ್ರೀತಿಯಿಂದಲೇ ಒಬ್ಬರನ್ನೊಬ್ಬರು ನಡಿಸಿ, ತಮ್ಮ ತಮ್ಮ ಸನ್ಮಾನವು ಕಳೆದು ಹೋಗದ ಹಾಗೆ ಎಚ್ಚರಿಕೆಯಾಗಿರ ಬೇಕು.

ಎಫೆ. ೫, ೨೨—೨೪ ವಚನಗಳಲ್ಲಿ ಹೇಳಿರುವದೇನಂದರೆ: ಸ್ತ್ರೀಯರೇ, ಗಂಡಂದ್ರುರಿಗೆ ಕರ್ತನಿಗೆಂದು ಆಧೀನವಾಗಿರ್ರಿ, ಯಾಕಂದರೆ ಗಂಡನು ಹೆಂಡತಿಯ ತಲೆಯಾಗಿದ್ದಾನೆ, ಕ್ರಿಸ್ತನು ಸಭೆಯ ತಲೆಯಾಗಿರುವ ಪ್ರಕಾರವೇ; ಮತ್ತು ಅವನೇ ಶರೀರದ ರಕ್ಷಕನು. ಆದರೆ ಸಭೆಯು ಕ್ರಿಸ್ತನಿಗೆ ಹ್ಯಾಗೋ ಹಾಗೆಯೇ ಹೆಂಡತಿಯರು ಸ್ವಂತ ಗಂಡಂದ್ರುರಿಗೆ ಎಲ್ಲಾದರಲ್ಲಿ ವಿಧೇಯರಾಗಿರಲಿ. ದೇವರ ವಾಕ್ಯದ ಈ ಮಾತುಗಳ ಪ್ರಕಾರ ಹೆಂಡತಿಯು ತನ್ನ ಗಂಡನಿಗೆ ಎಲ್ಲಾದರಲ್ಲಿ ಒಳಗಾಗಿರ ಬೇಕೆಂದು ಸ್ಥಾಪಿಸಿ ಅದೆ. ಹೆಂಡತಿಯು ಕ್ರೈಸ್ತಳಾಗಿ ಬದುಕ ಬೇಕಾದರೆ ಈ ಮಾತುಗಳು ಒಂದೊಂದು ವೇಳೆಯಲ್ಲಿ ಅವಳಿಗೆ ಸಮ ಕಾಣದೆ ಇದ್ದರೂ ಅದಕ್ಕೆ ವಿಧೇಯಳಾಗಿರುವ ಹಂಗಿನಲ್ಲಿದ್ದಾಳೆ. ಆದ ಕಾರಣ ಅವಳು ಗಂಡನಿಗೆ ವಿರೋಧಿಸಿ, ಅವನನ್ನು ತಾತ್ಸಾರ ಮಾಡಿ, ಅವನ ಅಧಿಕಾರಕ್ಕೆ ಒಳಗಾಗ ಮನಸ್ಸಿಲ್ಲದೆ, ತಾನೇ ಇಲ್ಲದ ಅಧಿಕಾರವನ್ನು ಅವನ ಮೇಲೆ ನಡಿಸ ಬೇಕೆಂಬ ಮನಸ್ಸು ಅವಳಿಗೆ

ದೂರವಾಗಿರಲಿ. ಆದರೆ ಗಂಡಂದಿರು ದೇವರು ತಮಗೆ ಕೊಟ್ಟಂ
ಥ ಅಧಿಕಾರವನ್ನು ಕೆಟ್ಟದ್ದಕ್ಕೆ ಆಧಾರ ಮಾಡಿ ಕೊಂಡು, ಅನ್ಯ
ಜನರೊಳಗೆ ನಡವಡಿಕೆಯಾಗಿರುವಂತೆ ತಮ್ಮ ಹೆಂಡತಿಯರನ್ನು
ತೊತ್ತಿನಂತೆ ಎಣಿಸಿ, ಅವರ ಮೇಲೆ ಕಠಿಣವಾಗಿ ಆಳ ಬಾರ
ದು. ಆದರೆ ಹೆಂಡತಿಯರನ್ನು ಸ್ವಂತ ಶರೀರದ ಹಾಗೆ ಪ್ರೀತಿ
ಮಾಡಿ, ಅವರಿಗೆ ಕಹಿಯಾಗಿರದೆ, ಜೀವದ ಕೃಪೆಗೆ ಸಮಬಾಧ್ಯ
ಸ್ಥರಾಗಿ, ಜ್ಞಾನದ ಪ್ರಕಾರ ಅವರ ಸಂಗಡ ಒಗತನ ಮಾಡಿ, ಬ
ಲಹೀನ ಪಾತ್ರೆಗೆಂದು ಹೆಂಗಸಿಗೆ ಮಾನ ಸಲ್ಲಿಸ ತಕ್ಕದ್ದು. (ಎಫೆ.
೫, ೨೮. ಕೊಲೊ. ೩, ೧೯. ೧ಪೇತ್ರ. ೩, ೭.) ಒಂದು ವೇ
ಳೆ ಹೆಂಡತಿಯು ದೇವರ ವಾಕ್ಯಕ್ಕೆ ಒಳಗಾಗದೆ, ಸ್ವಂತ ಚಿತ್ತದಿಂ
ದ ತನ್ನ ಗಂಡನಿಗೆ ವಿಧೇಯಳಾಗುವ ಮನಸ್ಸಿಲ್ಲದೆ ಇದ್ದರೆ
ಗಂಡನು ಒಮ್ಮಿಂದೊಮ್ಮೆ ಅವಳು ಜುಲ್ಮೆಯಿಂದ ತನಗೆ ಒಳಗಾ
ಗ ಬೇಕೆಂದು ಗದ್ದಲ ಮಾಡುವದು ಹೆಡ್ಡ ಕೆಲಸವು. ಅವಳು
ತಾನಾಗಿ ಪ್ರೀತಿಯಿಂದ ಒಳಗಾಗುವ ಹಾಗೆ ಗಂಡನು ತಾನೇ
ಅವಳ ಮುಂದೆ ಒಳ್ಳೆಯವನಾಗಿಯೂ ಸಂಭಾವಿತನಾಗಿಯೂ ನ
ಡ ಕೊಂಡು, ಒಳ್ಳೇ ಮಾದರಿಯನ್ನು ತೋರಿಸ ಬೇಕು. ಇದರಿಂ
ದ ಅವಳು, ಗಂಡನು ಸನ್ಮಾನಕ್ಕೆ ತಕ್ಕಂಥಾ ಪುರುಷನೆಂದು ತಿಳಿ
ದು, ಸನ್ಮಾನ ಕೊಟ್ಟು, ತಲೆಯಾದ ಗಂಡನಿಗೆ ಅಂಗವಾದ ತನ್ನ
ನ್ನು ತಾನಾಗಿಯೇ ಸಂತೋಷದಿಂದ ಒಪ್ಪಿಸಿ ಕೊಡುವಳು. ಪ್ರೀ
ತಿಯಿಂದುಂಟಾಗುವ ಐಕ್ಯವು ಬಹು ಹಿತವಾದದ್ದಾಗಿ, ಬಹಳ

ದಿವಸ ನಿಲ್ಲುವಂಥಾದ್ದಾಗೆದೆ. ಆದರೆ ಬಲತ್ಕಾರದಿಂದ ರೂಢಿ ಯಾಗಿ ಒಳ್ಳೇ ಫಲಗಳು ಹುಟ್ಟುವದಿಲ್ಲವು. ಒಬ್ಬನು ಸನ್ಮಾನಕ್ಕೆ ತಕ್ಕವನೆಂದು ತಿಳಿಯುವದರಿಂದಲೇ ಅವನ ಮೇಲೆ ಐಕ್ಯವಾಗುವಂಥ ಪ್ರೀತಿಯು ಹುಟ್ಟುವದು. ಆದರೆ ಸನ್ಮಾನವು ಮದುವೆಯ ಸ್ಥಿತಿಯಲ್ಲಿ ಶೇರಿದವರೊಳಗೆ ಬೇರೆ ಬೇರೆ ಕಾರಣಗಳಿಂದ, ಮುಖ್ಯವಾಗಿ ನಾಯಿಯಂತೆ ಕಾಮಿಚ್ಛೆಯಲ್ಲಿ ಮುಣುಗಿರುವದರಿಂದಲೇ ಬಹಳವಾಗಿ ಕಳೆದು ಹೋಗುತ್ತದೆ. ಇಂಥವರ ಕುಟುಂಬದಲ್ಲಿ ದೇವರು ಗಂಡ ಹೆಂಡತಿಯರಿಗೆ ನೇಮಿಸಿದ ಕ್ರಮವು ತಪ್ಪಿದರೆ ಆಶ್ಚರ್ಯವಲ್ಲ. ಆ ಕ್ರಮವು ಏನಂದರೆ: ಒಬ್ಬೊಬ್ಬನು ತನ್ನ ಹೆಂಡತಿಯನ್ನು ತನ್ನ ಹಾಗೆಯೇ ಪ್ರೀತಿ ಮಾಡಲಿ. ಮತ್ತು ಹೆಂಡತಿಯು ಗಂಡನಿಗೆ ಭಯ ಪಡಲಿ (ಎಫೆ. ೫, ೩೩.), ಎಂಬುವದೇ. ಹೀಗಿರುವದರಿಂದ ಮದುವೆಯ ಸ್ಥಿತಿಯಲ್ಲಿ ಶೇರಿದವರೊಳಗೆ ಸನ್ಮಾನವು ತಪ್ಪದ ಹಾಗೆ ಮುಖ್ಯವಾದ ಚಿಂತೆಯು ಇರ ತಕ್ಕದ್ದು. ಇಂಥಾ ಪ್ರಯತ್ನವನ್ನು ನಡಿಸಿದರೆ ಕಠೋರವಾದ ಆಳಿಕೆಯೂ ಬಲತ್ಕಾರವೂ ಏನೂ ಬೇಕಾಗದೆ, ತಾನಾಗಿಯೇ ಪ್ರೀತಿಯೂ ವಿಧೇಯತ್ವವೂ ಹುಟ್ಟುವದು. ಒಂದು ದಿವಸದಲ್ಲಿ ಕೆಲವು ಮನುಷ್ಯರು ನನ್ನ ಬಳಿಗೆ ಬಂದಾಗ ನಾನು ಅವರಿಗೆ ಮೇಲೆ ಬರೆದ ಈ ಬೋಧನೆಯನ್ನು ಹೇಳಿದೆನು. ಆಗ ಅವರಲ್ಲಿ ಒಬ್ಬನು ಆಹಾ! ಈ ಬೋಧನೆಯು ನನ್ನ ಹೆಂಡತಿಗೆ ತಕ್ಕದ್ದಲ್ಲ, ಅವಳಿಗೆ ಮಾತ್ರ ಲತ್ತೆಯೇ ತಕ್ಕದ್ದು ಎಂದು ಹೇಳಿದ

ನು. ಅದಕ್ಕೆ ನಾನು ಅವನಿಗೆ—ನೀನು ಕತ್ತೆಯನ್ನು ಕಂಡಿದ್ಧೀ ಯಾ? ಅದು ಪೆಟ್ಟು ತಿನ್ನದೆ, ತಾನೇ ನಡದೀತೋ? ಅಂದೆನು. ಅವನು ಇಲ್ಲಾ, ಕತ್ತೆಗೆ ಲತ್ತೆಯೂ ಪೆಟ್ಟೂ ಬೇಕು ಅಂದಾಗ ನಾನವನಿಗೆ—ನೀನು ಆಬುರುಗೇಡಿಯಾಗಿ ಮರುಳು ಗೊಂಡು, ಒಂದು ಕತ್ತೆಯನ್ನು ನಿನಗೆ ಮದುವೆ ಮಾಡಿ ಕೊಂಡಿದ್ದರೆ ಈಗ ಕತ್ತೆ ಕಾಯುವವನಾಗಿರುತಿದ್ದಿ, ಎಂದು ಹೇಳಿದೆನು. ಈ ಮಾತಿ ಗೆ ಅವನು ನಾಚಿ, ಕತ್ತೆ ಕಾಯುವವನಂತೆ ತನ್ನ ಹೆಂಡತಿಯನ್ನು ನಡಿಸುವದಕ್ಕಿಂತ ನಾನು ಹೇಳಿದ ಹಾಗೆ ನಡಿಸುವದು ಉತ್ತಮ ವೆಂದು ತಿಳು ಕೊಂಡನು.

೧೪ನೇ ಕ್ರಮವು.

ಹೆಂಡತಿಯು ಗಂಡನನ್ನು ತಿರಸ್ಕರಿಸ ಬಾರದು.

ನಾನು ಒಂದು ದಿವಸದಲ್ಲಿ ಒಬ್ಬ ಘನ ಉಳ್ಳ ಸ್ತ್ರೀಯ ಸಂ ಗಡ ಮಾತಾಡುವಾಗ, ಆಕೆಯು ತನ್ನ ಗಂಡನ ತಪ್ಪುಗಳನ್ನು ಬ ಹಿರಂಗಕ್ಕೆ ಹಾಕಿ, ಅವನನ್ನು ತಿರಸ್ಕರಿಸಿದಳು. ಆಗ ನಾನು ಆಕೆ ಗೆ—ಓ, ಅಮ್ಮನವರೇ, ನೀವು ನಿಮ್ಮ ಗಂಡನನ್ನು ಈ ಪ್ರಕಾರ ಬಿಟ್ಟಾಡಿ, ಅವರನ್ನು ಹೀನೈಸ ಬಾರದು; ಯಾಕಂದರೆ ಗಂಡ ನಿಂದಲೇ ಹೆಂಡತಿಗೆ ಹೆಸರು ಬರುತ್ತದೆ. ಹ್ಯಾಗಂದರೆ: ನೀವು

ನಿಮ್ಮ ಗಂಡನನ್ನು ಧಿಕ್ಕರಿಸಿ, ಅವನಿಗೆ ಕುಂಬಾರನೆಂದು ಹೇಳಿದರೆ ಸ್ವತಹಾ ನೀವೆ ಕುಂಬಾರ್ತಿಯರಾಗುತ್ತೀರಿ, ಎಂದು ಹೇಳಿದೆನು.

೧೫ನೇ ಕ್ರಮವು.

ಹೆಂಡತಿಯು ಗಂಡನ ಮನೆಯಲ್ಲಿ ತುಡುಗುತನದವಳೂ ವೈಗಳ್ಳಳೂ ಚಾಡಿಗಾರಳೂ ಆಗಿರ ಬಾರದು.

ನಾನು ನನ್ನ ಮಗಳನ್ನು ಮದುವೆ ಮಾಡಿ ಕೊಡುವದಕ್ಕೆ ಮನಸ್ಸು ಮಾಡಿದಾಗ ಅವಳಿಗೆ ಒಂದು ಬುದ್ಧಿಯನ್ನು ಕಲಿಸ ಬೇಕೆಂದು ನೆನಸಿ, ಒಲೆಯ ಮುಂದೆ ಮಲಗಿದ್ದ ಒಂದು ಬೆಕ್ಕನ್ನು ಅವಳಿಗೆ ತೋರಿಸಿ, ನೀನು ಆ ಬೆಕ್ಕಿನಂತೆ ಆಗದ ಹಾಗೆ ನೋಡಿ ಕೋ, ಅಂದೆನು. ಅದಕ್ಕವಳು — ಇದರಿಂದ ಏನು ಹೇಳ ಬೇಕೆಂ ದಿರುತ್ತೀ? ಎಂದು ಕೇಳಿದಾಗ ನಾನು ಅವಳಿಗೆ ಹೇಳಿದ್ದೇನಂದ ರೆ: ಈ ಬೆಕ್ಕು ಯಾವಾಗಲೂ ತಿರುಗುವದೂ, ಕಂಡ ಕಂಡ ಸೋ ರೆಗಳಲ್ಲಿ ಬಾಯಿ ಹಾಕಿ ನೆಕ್ಕುವದೂ, ಹಾಲು ಬೆಣ್ಣೆ ಮುಂತಾ ದ ಶೀಯಾದ ಪದಾರ್ಥಗಳನ್ನು ತಿನ್ನುವದಕ್ಕೆ ಅಪೇಕ್ಷಿಸುವದೂ, ಒಡಲು ತುಂಬಿದ ಮೇಲೆ ಬೆಚ್ಚಗಾದ ಸ್ಥಳ ನೋಡಿ ಮಲಗಿ ಕೊಳ್ಳುವದೂ, ಎದ್ದ ಮೇಲೆ ಏನಾದರೂ ಶಿಗುವ ತನಕ ಯಜ ಮಾನರ ಕಾಲು ಸುತ್ತ ಮ್ಯಾಂವು ಮ್ಯಾಂವೆನ್ನುತ್ತಾ ತಿರುಗುವ ದೂ, ಇವೇ ಹೊರ್ತು ಮತ್ತೇನೂ ಇಲ್ಲ; ಇದೇ ಪ್ರಕಾರವೇ ಸ್ತ್ರೀ

ಯರು ಶೀಯಾದದ್ದೇನಾದರೂ ತಿನ್ನುವದಕ್ಕೆ ಅಲ್ಲಿಲ್ಲಿ ಹುಡುಕು ತ್ತಾ, ಮೈಗಳ್ಳರಾಗಿ ಕೆಲಸ ಮಾಡ ಮನಸ್ಸಿಲ್ಲದೆ, ಶಾಲೆ ಸುತ್ತಿ ಕೊಂಡು ಮಲಗುತ್ತಾ, ಮನೆ ಮನೆಗಳನ್ನು ತಿರುಗಿ ಹರಟೆ ಮಾ ಡುತ್ತಾ, ತಮ್ಮ ಗಂಡನೇ ಎಲ್ಲಾ ಕೆಲಸ ಮಾಡಿ ಹಣ ಸಂಪಾದಿ ಸಿ ತರ ಬೇಕೆಂದು ಮ್ಯಾಂವ ಅನ್ನುತ್ತಾ ಇರುವರು; ಇದಲ್ಲದೆ ತಾವು ಬೆಕ್ಕಿನಂತೆ ಚಿಂನಾಟಿಕೆ ಆಡುವದಕ್ಕಾಗಿ ಒಬ್ಬರ ಚಾಡಿ ಮ ತ್ತೊಬ್ಬರಿಗೆ ಹೇಳಿ, ಝಗಳ ಹುಟ್ಟಿದ ಮೇಲೆ ಸಂತೋಷ ಪಟ್ಟು ನಗುವರು; ಆದದರಿಂದ ಮೇಲೆ ಹೇಳಿದ ಪ್ರಕಾರ ಮೈಗಳ್ಳತನದ ಲ್ಲಿ ಸುಖವನ್ನು ಹುಡುಕಿ, ತಮ್ಮ ಮಾಂಸವನ್ನು ಬೆಳಿಸುವದಕ್ಕೆ ಇ ಚ್ಛೈಸುವದು ನಾಚಿಕೆಯಾಗಿದೆ; ಯಾಕಂದರೆ ಇಂಥ ಗುಣ ಉ ಳ್ಳವಳು ಒಂದು ಬುದ್ಧಿಗೇಡಿ ಬೆಕ್ಕಿನಂತೆ ಈ ಲೋಕದಲ್ಲಿ ಬದು ಕುವಳು; ಆದ ಕಾರಣ ನನ್ನ ಮಗಳೇ, ನೀನು ಬೆಕ್ಕು ಆಗದ ಹಾಗೆ ನೋಡಿಕೋ!

೧೬ನೇ ಕ್ರಮವು.

ಬಾಲಶಿಕ್ಷೆಯ ವಿಷಯ.

ದೇವರು ತಂದೆ ತಾಯಿಗಳಿಗೆ ಒಪ್ಪಿಸಿದ ಎಲ್ಲಾ ಕೆಲಸಗಳಿ ಗಿಂತ ಮಕ್ಕಳನ್ನು ಬೆಳಿಸುವ ಕೆಲಸವು ಶ್ರೇಷ್ಠವಾದದ್ದು. ಮಕ್ಕ

ಳನ್ನು ಪಡ ಕೊಂಡವರು ದೇವರಿಂದ ಒಂದು ರತ್ನವನ್ನು ಪಡ ಕೊಂಡವರ ಹಾಗಿದ್ದಾರೆ. ರತ್ನ ಉಂಟಾದವನು ಅದಕ್ಕೆ ಕಿಲುಬು ಹಿಡಿಯದ ಹಾಗೆ ಆಗಾಗ್ಯೆ ಅದಕ್ಕೆ ಒಪ್ಪ ಕೊಡುತ್ತಾ, ಅದು ಕಳೆ ದು ಹೋಗದ ಹಾಗೆ ಯಾವ ಪ್ರಕಾರ ಜಾಗ್ರತೆಯಾಗಿರುತ್ತಾ ನೋ, ಅದೇ ಪ್ರಕಾರ ಮಕ್ಕಳನ್ನು ಹೊಂದಿದವರು ಬಹು ಜಾಗ್ರ ತೆಯಾಗಿರ ಬೇಕು; ಯಾಕಂದರೆ ಯಾರಿಂದ ಈ ಮಕ್ಕಳನ್ನು ಪಡ ಕೊಂಡರೋ, ಆ ಕರ್ತನಾದ ದೇವರಿಗೆ ತಿರಿಗಿ ಅವರನ್ನು ಒಪ್ಪಿಸಿ, ತಾವು ಹ್ಯಾಗೆ ಅವರನ್ನು ನಡಿಸಿದೆವೆಂಬದರ ವಿಷಯ ಆತನಿಗೆ ಲೆ ಖ್ಖ ಕೊಡಬೇಕಾಗುತ್ತದೆ. ಆದರೆ ಮಕ್ಕಳ ವಿಷಯ ಇಂಥಾ ದೊ ಡ್ಡ ಹಂಗು ಹೆತ್ತವರ ಮೇಲೆ ಬಿದ್ದಿದ್ದಾಗ್ಯೂ ಅವರು ಈ ಶ್ರೇಷ್ಠ ವಾದ ಕೆಲಸದ ಸಲುವಾಗಿ ಚಿಂತಿಸದೆ, ಅದನ್ನು ಹ್ಯಾಗೆ ತೀರಿಸ ಬೇಕೆಂಬ ಆಲೋಚನೆ ಸಹಾ ಮಾಡದೆ ಇರುತ್ತಾರೆ. ಆದ ಕಾ ರಣ ಬಹು ಮಕ್ಕಳು, ಹಂದರಕ್ಕೆ ಹಬ್ಬಿಸದ ಬಳ್ಳಿಯು ಅಡ್ಡಾದು ಡ್ಡಿಯಾಗಿ ಬೆಳದು, ಮುಳ್ಳು ಕಂಟಿಯೊಳಗೆ ಶಿಗುವ ಪ್ರಕಾರ, ಈ ಲೋಕದ ಕೇಡಿನೊಳಗೆ ಶಿಕ್ಕು, ತಮಗೂ ತಮ್ಮ ತಂದೆ, ತಾ ಯಿಗಳಿಗೂ ನಷ್ಟವನ್ನೂ ಅಪಮಾನವನ್ನೂ ತರುವವರಾಗಿ ಇ ರುತ್ತಾರೆ.

ವಿಶೇಷವಾಗಿ ಬಾಲಕರಿಗೆ ಇಹ ಪರದಲ್ಲಿ ಶೋಭಿಸುವಂಥ ಅಲಂಕಾರಗಳು ನಾಲ್ಕು ಇರುತ್ತವೆ. ಅವುಗಳನ್ನು ಮಕ್ಕಳಿಗೆ ಥ

ರಿಸುವದಕ್ಕೆ ತಂದೆ ತಾಯಿಗಳು ಬಹು ಜಾಗ್ರತೆಯಿಂದ ಪ್ರಯತ್ನ ಮಾಡ ಬೇಕು. ಅವು ಯಾವವಂದರೆ:

೧. ದೇವಭಕ್ತಿ. ದೇವರಿಗೆ ಭಯ ಪಟ್ಟು, ಆತನನ್ನು ಪ್ರೀತಿ ಮಾಡಿ, ಆತನ ಮೇಲೆ ಭರವಸವಿಡುವಂಥ ದೇವಭಕ್ತಿಯು ಒಬ್ಬನ ಹೃದಯದಲ್ಲಿದ್ದರೆ ಅವನು ಯಾವ ಸ್ಥಿತಿಯಲ್ಲಿ ಸೇರಿದರೂ ಅವನ ವಿಷಯ ಚಿಂತೆ ಮಾಡುವದು ಅವಶ್ಯವಿಲ್ಲ. ಈ ಲೋಕದ ಕಷ್ಟ ಉಪದ್ರ ಶೋಧನೆಗಳು ಸಮುದ್ರದ ತೆರೆಗಳಂತೆ ಅವನ ಮೇಲೆ ಬಿದ್ದರೂ ಅವನು ಅವುಗಳಲ್ಲಿ ಮುಣುಗಿ ನಾಶನವಾಗನು; ಯಾಕಂದರೆ ಇಂಥವನನ್ನು ಕರ್ತನು ಕೈಬಿಡದೆ, ಸದಾಕಾಲ ಅವನಿಗೆ ಆಶ್ರಯವಾಗಿದ್ದಾನೆ. ಒಬ್ಬನು, ಪಾಪ ಅಕ್ರಮ ಮಾಡದ ಹಾಗೆ ಹೆತ್ತವರ ಬೆದರಿಕೆಯಾದರೂ ಅರಸರ ಕಠೋರವಾದ ಆಜ್ಞೆಯಾದರೂ ಬಹು ಕಾಲ ತಡೆಯಲಾರನು; ಆದರೆ ಮೇಲೆ ಹೇಳಿದ ದೇವಭಕ್ತಿಯು ಪಾಪಕ್ಕೆ ಅವನನ್ನು ತಡೆಯುತ್ತದೆ. ಆದದರಿಂದ ತಂದೆ ತಾಯಿಗಳು ಆ ಸ್ತ್ರೀಯರಂತೆ (ಮಾರ್ಕ. ೧೦, ೧೩.) ತಮ್ಮ ಮಕ್ಕಳನ್ನು ಚುರುಕಾದ ಪ್ರಾರ್ಥನೆಯಿಂದ ಕರ್ತನ ಮುಂದೆ ತರುತ್ತಾ, ದೇವರ ವಾಕ್ಯವನ್ನು ಬಹು ಭಯ ಭಕ್ತಿಯಿಂದ ಅವರಿಗೆ ಕಲಿಸಿ ದೇವಭಕ್ತಿಯು ಅವರ ಹೃದಯದೊಳಗೆ ಬೇರೂರುವ ಹಾಗೆ ಪ್ರಯತ್ನ ಮಾಡ ಬೇಕು. ಹೀಗೆ ಮಾಡುವ ತಂದೆ ತಾಯಿಗಳು ಒಬ್ಬನಿಗೆ ಇದ್ದರೆ ಅವನ ಲಾಭವನ್ನು ಯಾರು ವಿವರಿಸುವರು? ಅಂಥವರ ಮನೆಯೊಳ

ಗೆ ಬೆಳದ ಮಗನು ಕೆಲವು ಕಾಲ ಪಾಪದಲ್ಲಿ ನಡದರೂ ಚಿಕ್ಕತನದಲ್ಲಿ ಅವನ ಹೃದಯದೊಳಗೆ ಬಿದ್ದ ದೇವರ ವಾಕ್ಯದ ಬೀಜವು ತಕ್ಕ ಸಮಯದಲ್ಲಿ ಸುಂದರವಾದ ನೀತಿಫಲವನ್ನು ಫಲಿಸುವದು. ನಿಜವಾದ ಭಕ್ತಿಯು ಮಕ್ಕಳಲ್ಲಿ ಹುಟ್ಟುವ ಹಾಗೆ ಹೆತ್ತವರು ತಾವೇ ಅವರಿಗೆ ಒಳ್ಳೇ ಮಾದರಿಯಾಗಿದ್ದು, ಎಡೆ ಬಿಡದೆ ದೇವರ ಸಮುಖದಲ್ಲಿ ಭಯ ಭಕ್ತಿಯಿಂದ ನಡೆದು ಕೊಳ್ಳ ಬೇಕು.

೨. ಸತ್ಯತ್ವ. ಸತ್ಯವಂತರು ದೇವರಿಂದಲೂ ಮನುಷ್ಯರಿಂದಲೂ ದಯವನ್ನು ಹೊಂದುವರು. ಸತ್ಯವಂತನು ಪಾಪವೆಂಬ ಬಲೆಯೊಳಗೆ ಬಿದ್ದರೂ ಅವನು ಪಾಪಕ್ಕೆ ಅಲ್ಲ, ಸತ್ಯಕ್ಕೆ ಮೆಚ್ಚುವದರಿಂದ ತಿರಿಗಿ ಅದರೊಳಗಿಂದ ಪಾರಾಗುತ್ತಾನೆ. ಆದರೆ ಸುಳ್ಳನ್ನು ಪ್ರೀತಿ ಮಾಡುವ ಸುಳ್ಳುಗಾರನು ಸುಳ್ಳಿನ ತಂದೆಯಾದ ಪಿಶಾಚನ ಮಗನಾಗಿರುವದರಿಂದ ಅಂಥವನಿಗೆ ಅಯ್ಯೋ! ಇಹಪರದಲ್ಲಿ ನಾಶನವು ಅವನಿಗೆ ಬರುವದು. ಹೀಗಿರುವದರಿಂದ ತಂದೆ ತಾಯಿಗಳು ಮಕ್ಕಳಲ್ಲಿ ಏನಾದರೂ ಒಂದು ಸುಳ್ಳು ಕಂಡರೆ ಕನಿಕರಿಸದೆ ಶಿಕ್ಷೆ ಮಾಡಿ, ಸುಳ್ಳನ್ನು ಅವರೊಳಗಿಂದ ಕಿತ್ತು ಹಾಕುವ ಹಾಗೆ ಎಚ್ಚರದಿಂದ ಇರ ಬೇಕು. ಆದರೆ ಮಕ್ಕಳನ್ನು ಸತ್ಯದೊಳಗೆ ಶೇರಿಸುವದಕ್ಕೆ ಮಾಡ ಬೇಕಾದ ಮುಖ್ಯ ಸಾಧನೆ ಯಾವದಂದರೆ: ಹೆತ್ತವರು ತಮ್ಮ ಮಕ್ಕಳಿಗೆ ಹೇಳುವ ಬೆದರಿಕೆಯ ಮಾತಾಗಲಿ, ಶಿಕ್ಷೆಯ ಮಾತಾಗಲಿ, ಯಾವದನ್ನು ಅವರ ಮುಂದೆ ಹೇಳಿರುತ್ತಾರೋ, ಅದನ್ನು ತಪ್ಪಗೊಡದೆ, ಮಾಡ

ಬೇಕು; ಮತ್ತು ತಾವು ಆಡುವ ಮಾತೆಲ್ಲಾ ಸತ್ಯವೇ ಎಂದು ಮಕ್ಕಳಿಗೆ ದೃಥವಾಗುವ ಹಾಗೆ ತಮ್ಮ ಬಾಯಿಯಿಂದ ಹೊರಟ ಒಂದು ಮಾತಾದರೂ ಹುಶಿ ಹೋಗಗೊಡ ಬಾರದು.

೩. ನೀಚವಾದ ಕಾಮಕ್ಕೆ ಹೇಶಿ ಕೊಳ್ಳುವ ಮನಸ್ಸು.

ಎಳೆದಾದ ಬಾಳೆಯ ಗಿಡಕ್ಕೆ ಒಂದು ಕೀಡೆಯು ಹತ್ತಿದರೆ ಅದರ ಸೌಂದರ್ಯವು ಯಾವ ಪ್ರಕಾರ ಬಾಡಿ ಹೋಗುತ್ತದೋ, ಆ ಪ್ರಕಾರವೇ ಕಾಮವೆಂಬ ಕೀಡೆಯು ಬಹಳ ಮನುಷ್ಯರಿಗೆ ಹತ್ತಿ ಅವರ ಸೌಂದರ್ಯವನ್ನೆಲ್ಲಾ ಕುಂದಿಸಿ ಬಿಡುತ್ತದೆ. ಹೂವಿನ ಮೊಗ್ಗಿಗೆ ಹುಳ ಹತ್ತಿ ಅರಳದಂತೆ ಅದನ್ನು ಹ್ಯಾಗೆ ಕೆಡಿಸಿ ಬಿಡುವದೋ, ಹಾಗೆಯೇ ಕಾಮವು ಈಗಿನ ಕಾಲದಲ್ಲಿ ಬಹು ಪ್ರಬಲವಾಗಿ ಚಿಕ್ಕವರಿಗೆ ತಗಲಿ, ಅವರ ಜ್ಞಾನವೂ ಅವರ ತ್ರಾಣವೂ ಈ ಮುಂತಾದ ಅವರಿಗಿರುವ ಶರೀರಾತ್ಮದ ಶಕ್ತಿಗಳು ಅರಳದ ಹಾಗೆ ದೊಡ್ಡ ನಷ್ಟ ಮಾಡುತ್ತದೆ; ಯಾಕಂದರೆ ಹುಡುಗರು ಇನ್ನೂ ಚಿಕ್ಕವರಾಗಿರುವಾಗಲೇ ಕಾಮವು ಅವರ ಮನಸ್ಸಿನಲ್ಲಿ ಹಬ್ಬಿದರೆ ಅದು ಬರಬರುತ್ತಾ ದೊಡ್ಡದಾಗಿ, ತುಂಬಿದ ಹಳ್ಳದಂತೆ ಆಸಪಾಸ ಇದ್ದವರನ್ನು ತನ್ನ ಶಳವಿಗೆ ಎಳ ಕೊಳ್ಳುತ್ತದೆ. ಆವಾಗ ಅದನ್ನು ನಿಲ್ಲಿಸಲಿಕ್ಕೆ ಯಾರಿಂದಲೂ ಆಗದು; ಹೀಗಾಗಿ ಬಹಳ ದೊಡ್ಡ ಕೇಡಿಗೆ ಕಾರಣವಾಗುವದು. ಆದದರಿಂದ ತಂದೆ ತಾಯಿಗಳು ತಮ್ಮ ಮಕ್ಕಳು ಇಂಥಾ ಕೇಡಿನೊಳಗೆ ಬೀಳದ ಹಾಗೆ ಮೊದಲು ತಾವೇ ಬಹಳ ಮರ್ಯಾದಸ್ಥರಾಗಿ ಅವರ

ಮುಂದೆ ನಡೆದು, ಅವರು ಹೊರಗಿನವರಿಂದ ಸಹಾ ಇಂಥಾ ಅಶುದ್ಧ ನಾಚಿಗೆಗೇಡಿಯಾದ ಮಾತು ಕ್ರಿಯೆಗಳನ್ನು ಕೇಳಿ ನೋಡದ ಹಾಗೆ ಚನ್ನಾಗಿ ಕಾಪಾಡಿ, ಮಕ್ಕಳು ಎಲ್ಲಿರುತ್ತಾರೆಂಬದು ತಂದೆ ತಾಯಿಗಳಿಗೆ ಯಾವಾಗಲೂ ಗೊತ್ತಿರ ಬೇಕು. ಮತ್ತು ಮಕ್ಕಳಲ್ಲಿ ಇಂಥಾ ಅಸಹ್ಯವಾದದ್ದನ್ನು ಏನಾದರೂ ಕಂಡರೆ ಅದನ್ನು ಪೂರ್ಣವಾಗಿ ವಿರೋಧಿಸಿ, ಮಕ್ಕಳ ಅಂತರಂಗ ಬಹಿರಂಗವನ್ನು ಯಾವಾಗಲೂ ಪರೀಕ್ಷಿಸುತ್ತಾ ಇದ್ದು, ಅವರು ಈ ನೀಚತನದ ಗೊಡವೆಗೆ ಶೇರದಂತೆ ಅವರಲ್ಲಿ ಇದರ ವಿಷಯವಾಗಿ ದೊಡ್ಡ ನಾಚಿಗೆಯನ್ನೂ ಭಯವನ್ನೂ ಹುಟ್ಟಿಸುವ ಪ್ರಯತ್ನ ಮಾಡ ಬೇಕು.

೪. ವಿಧೇಯತ್ವ. ಮಕ್ಕಳೇ ಎಲ್ಲಾದರಲ್ಲಿ ಹೆತ್ತವರಿಗೆ ವಿಧೇಯರಾಗಿರ್ರಿ; ಇದೇ ಕರ್ತನಿಗೆ ಆನಂದಕರವಾದದ್ದು ಎಂದು ಬರೆದದೆ. (ಕೊಲೊ. ೩, ೨೦.) ತಂದೆ ತಾಯಿಗಳಿಗೆ ವಿಧೇಯವಾಗಿರುವಂಥಾದ್ದು ದೇವರಿಗೆ ವಿಧೇಯವಾಗಿರುವದರ ಮೂಲಾಧಾರವಾಗೆದೆ. ಚಿಕ್ಕತನದಲ್ಲಿ ತಂದೆ ತಾಯಿಗಳಿಗೆ ವಿಧೇಯನಾಗ ಕಲಿಯದವನು "ಗಿಡವಾಗಿ ಬೊಗ್ಗದ್ದು ಮರವಾಗಿ ಬೊಗ್ಗೀತೆ?" ಎಂಬ ಗಾದೆಯ ಪ್ರಕಾರ ದೊಡ್ಡವನಾದ ಮೇಲೆ ಮನುಷ್ಯರಿಗೂ ದೇವರಿಗೂ ಒಳಗಾಗದೆ, ಯಾರ ಮೇಲಾದರೂ ಲಕ್ಷ್ಯವಿಡನು. ಆದರೆ ಬಹು ಜನ ತಂದೆ ತಾಯಿಗಳು ಇದನ್ನು ಮನಸ್ಸಿಗೆ ತಾರದೆ, ತಮ್ಮ ಮಕ್ಕಳನ್ನು ತಮ್ಮ ಆಜ್ಞೆಯ ಪ್ರಕಾರ ನಡಿಸದೆ, ತಾವೇ

ಮಕ್ಕಳಿಗೆ ಒಳಗಾಗಿ, ಅವರ ಚಾಕರರಂತೆ ಅವರು ಹೇಳಿದ್ದನ್ನೆಲ್ಲಾ ಕೇಳಿ, ತಮ್ಮನ್ನು ಅಪಮಾನಕ್ಕೆ ಗುರಿ ಮಾಡುತ್ತಾರೆ. ಆದರೆ ಹೆತ್ತವರು ಈ ಕೆಟ್ಟ ರೂಢಿಯನ್ನು ಬಿಟ್ಟು, ತಮ್ಮ ಮಕ್ಕಳನ್ನು ತಮ್ಮ ಅಪ್ಪಣೆಯ ಪ್ರಕಾರ ನಡಿಸಿ, ಅವರ ಹಟಕ್ಕೆ ಏನೂ ಆಸ್ಪದ ಕೊಡದೆ, ಪೂರ್ಣವಾಗಿ ಅದನ್ನು ಮುರಿಯ ಬೇಕು. ಆದರೆ ಮಕ್ಕಳು ವಿಧೇಯವಾಗುವ ಹಾಗೆ ಹೆತ್ತವರು ಚಂಚಲ ಬುದ್ಧಿಯಿಂದ ಈ ಹೊತ್ತು ಮಾಡಂದದ್ದಕ್ಕೆ ನಾಳೆ ಬೇಡವೆಂದು, ಈ ಹೊತ್ತು ಒಂದು ಕಾರ್ಯವನ್ನು ಮಾಡಿದರೆ ಅದಕ್ಕೆ ಶಿಕ್ಷೆ ಕೊಟ್ಟು ನಾಳೆ ಅದೇ ಕಾರ್ಯವನ್ನು ಮಾಡಿದರೆ ಶಿಕ್ಷೆ ಕೊಡದೆ ಇರುವ ವಿಪರೀತ ಬುದ್ಧಿಯಿಂದ ಅವರನ್ನು ನಡಿಸ ಬಾರದು; ಯಾಕಂದರೆ ಹೀಗೆ ಮಾಡುವದರಿಂದ ಹೆತ್ತವರ ಮನಸ್ಸು ಮಕ್ಕಳಿಗೆ ಗೊತ್ತಾಗದೆ ಇದ್ದ ಕಾರಣ ಚಿಕ್ಕವರು ಸಹಾ ಸ್ಥಿರ ಬುದ್ಧಿಯವರಾಗುವದಿಲ್ಲ. ಆದದರಿಂದ ಹೆತ್ತವರು ಯಾವಾಗಲೂ ಸ್ಥಿರ ಚಿತ್ತದಿಂದ ಕ್ರಮವಾಗಿ ಅವರನ್ನು ನಡಿಸಿ, ತಮ್ಮ ಮಾತಿನಲ್ಲಿ ಒಂದಾದರೂ ಹುಸಿಯಾಗದ ಹಾಗೆ ನೆಟ್ಟಗೆ ನೋಡ ಬೇಕು. ಮತ್ತು ಅವರಲ್ಲಿ ಏನಾದರೂ ಒಂದು ದುರ್ಗುಣವ ಕಂಡರೆ ಅದನ್ನು ಸಡ್ಲ ಬಿಡದೆ, ಸಂಗಡಲೇ ಅದನ್ನು ಎದುರಿಸಿ, ಅಗತ್ಯವಾಗಿದ್ದರೆ ಶಿಕ್ಷೆ ಸಹಾ ಕೊಟ್ಟು, ಆ ದುರ್ಗುಣವನ್ನು ಕಿತ್ತು ಹಾಕ ಬೇಕು; ಯಾಕಂದರೆ ತನ್ನ ಬೆತ್ತ ಹಿಂದೆಗೆಯುವವನು ತನ್ನ ಮಗನನ್ನು ಹಗೆ ಮಾಡುತ್ತಾನೆ; ಆದರೆ ಅವನನ್ನು ಪ್ರೀತಿ ಮಾಡುವವ

ನು ಬಾಲ್ಯದಲ್ಲಿ ಅವನನ್ನು ಶಿಕ್ಷಿಸುತ್ತಾನೆ, ಎಂದು ಬರೆದದೆ. (ಸಾಮ. ೧೩, ೨೪.) ಆದರೆ ಕಠಿಣ ಮನಸ್ಸಿನಿಂದಲ್ಲ, ಪ್ರೀತಿಯಿಂದಲೇ ಮಕ್ಕಳು ತಮ್ಮ ತಪ್ಪಿಗೆ ತಕ್ಕದ್ದನ್ನು ಹೊಂದಿದೆವೆಂದು ತಿಳುಕೊಳ್ಳುವ ಹಾಗೆ ಅವರಿಗೆ ಶಿಕ್ಷೆ ಕೊಡ ತಕ್ಕದ್ದು. ಯಾಕಂದರೆ ಕಾಠಿಣ್ಯದಿಂದ ಅವರನ್ನು ಶಿಕ್ಷಿಸಿದರೆ ಅವರ ಮನಸ್ಸು ಕುಂದಿ ಅವರಲ್ಲಿ ಕೋಪವೇಳುತ್ತದೆ. ಬಹಳವಾಗಿ ತಾಯಿಗಳು ಮಕ್ಕಳಿಗೆ ಸುಮ್ಮನೆ ಬೆದರಿಕೆಯನ್ನು ತೋರಿಸಿ, ಅದನ್ನು ಸಿದ್ಧಿಗೆ ತಾರದೆ ಇರುವ ರೂಢಿಯು ಬಹಳ ದೊಡ್ಡ ಕೇಡಿಗೆ ಕಾರಣವಾಗಿರುತ್ತದೆ; ಯಾಕಂದರೆ ಇದರಿಂದ ತಾಯಿಗಳ ಸನ್ಮಾನ ತಪ್ಪಿ, ಅಧಿಕಾರ ಹೋಗಿ, ಮಕ್ಕಳು ಅವರಿಗೆ ತಾತ್ಸಾರ ಮಾಡಿ, ಕಠಿಣ ಮನಸ್ಸುಳ್ಳವರಾಗುತ್ತಾರೆ. ಮತ್ತು ಇದರಿಂದ ತಂದೆ ತಾಯಿಗಳಿಗೆ ಬಹು ಉಪದ್ರವೂ, ದುಃಖವೂ ಉಂಟಾಗುತ್ತವೆ. ಮಕ್ಕಳ ತಪ್ಪುಗಳಿಗೆಲ್ಲಾ ದೊಡ್ಡ ಶಿಕ್ಷೆಯನ್ನೇ ಕೊಡ ಬೇಕೆಂಬದು ನನ್ನ ಮಾತಲ್ಲ; ಸಣ್ಣ ಶಿಕ್ಷೆಯಿಂದಲೇ ಅವರ ತಪ್ಪುಗಳನ್ನೆಲ್ಲಾ ತಪ್ಪದೆ ದಂಡಿಸಿದರೆ ಬೆದರಿಕೆಯ ಸಾವಿರಾರು ಮಾತುಗಳಿಗಿಂತ ಈ ಶಿಕ್ಷೆಯಿಂದ ಬೇಗನೆ ಸಾರ್ಥಕವಾಗುವದು. ಆದರೆ ಈ ಸಣ್ಣ ಶಿಕ್ಷೆಯು ಚಪ್ಪಳಿಸುವಂಥ ಹಗುರವಾದ ಪೆಟ್ಟುಗಳಲ್ಲಿ, ಮಕ್ಕಳಿಗೆ ಬೇಕಾದ ಜೀನಸುಗಳನ್ನು ಕೊಡುವದರಲ್ಲಿ ತಾಯಿಯು ಕೈಬಿಗಿ ಹಿಡಿದು, ಅವರು ಮಾಡಿದ ತಪ್ಪಿಗೆ ತಾನು ಅಗದಿ ಶೇರುವದಿಲ್ಲವೆಂಬುವದನ್ನು ತೋರಿಸುವಂಥಾದ್ದೇ; ಆದರೆ ಬಾಲಶಿಕ್ಷೆಯು ಮುಖ್ಯವಾಗಿ

ತಂದೆಯ ಕೆಲಸವು; ಆದ ಕಾರಣ ತಂದೆಯು ಯಾವ ನೆವದಿಂದಾದರೂ ಈ ಹಂಗಿಗೆ ತಪ್ಪಿಸಿ ಕೊಳ್ಳದೆ, ಅದನ್ನು ತೀರಿಸಬೇಕು.

ಹೆತ್ತವರು ಮಕ್ಕಳಿಗೆ ತಾವು ಪ್ರೀತಿ ಮಾಡುತ್ತೇವೆಂದು ಹೇಳಿ, ಅವರಿಗೆ ಛಂದವಾದ ಅಂಗಿಯನ್ನು ತೊಡಿಸಿ, ನಾನಾ ಬಣ್ಣದ ಕುಲಾವಿ ಮುಂತಾದದ್ದನ್ನು ಧರಿಸಿ, ಮಂಗಗೆ ಶೃಂಗರಿಸಿದ ಹಾಗೆ ಅವರನ್ನು ಶೃಂಗರಿಸಿ, ಎದುರಿಗೆ ನಿಲ್ಲಿಸಿ ಕೊಂಡು, ಆಹಾ! ಇದು ನಿನಗೆ ಬಹಳ ಒಪ್ಪುತ್ತದೆ, ನಿನ್ನ ಹಾಗೆ ಯಾರೂ ಇಲ್ಲ ಎಂತ, ಅವರನ್ನು ಉಬ್ಬಿಸುತ್ತಾರೆ. ಇದರಿಂದ ಹುಡುಗರ ಮನಸ್ಸಿನೊಳಗೆ ಗರ್ವ ಬೆಳದು, ಉಳಿದವರನ್ನು ತಾತ್ಸಾರ ಮಾಡಿ, ತಾವೇ ದೊಡ್ಡವರ ಮಕ್ಕಳು, ತಮ್ಮ ಸಮಾನ ಯಾರೂ ಇಲ್ಲವೆಂದು ನೆನಸಿ, ಹೆಮ್ಮೆ ಮಾಡ ಕಲಿಯುವರು. ಮತ್ತು ಹುಡುಗರನ್ನು ಬಾಲ್ಯದಲ್ಲಿಯೇ ಸಾಲೆಗೆ ಹಾಕಿ ವಿದ್ಯ ಕಲಿಸಿದರೂ, ಅವರು ಓಣಿ ಓಣಿಗಳಲ್ಲಿ ತಿರುಗಿ ಪೈಗಳ್ಳರಾಗದೆ, ವಿದ್ಯಾಭ್ಯಾಸ ಮಾಡುವದರಿಂದ ಅವರಿಗೆ ಇಹಪರದಲ್ಲಿ ಲಾಭವಾಗ ಬೇಕೆಂಬದರ ಸಲುವಾಗಿ ಅಲ್ಲ, ಅವರು ಗಿಣಿಯಂತೆ ಎರಡು ಮೂರು ತರದ ಅಕ್ಷರಗಳನ್ನು ಕಲಿತ ಮೇಲೆ ಅವರು ಓದುವದನ್ನು ಕೇಳುವವರು — ಆಹಾ! ಅವರು ಯಾರ ಮಕ್ಕಳು? ಎಷ್ಟೋ ನೆಟ್ಟಗೆ ಓದುತ್ತಾರೆ! ಎಂದು ತಮ್ಮನ್ನು ಹೊಗಳಿಸಿ ಕೊಳ್ಳ ಬೇಕೆಂಬ ಆಶೆಯಿಂದ ಕಲಿಸುತ್ತಾರೆ. ಆದರೆ ಈ ಮೊದಲಾದ ಹುಚ್ಚು ಡಂಭಾಚಾರದಿಂ

ದಿರುವವರು ತಮ್ಮ ಮಕ್ಕಳನ್ನು ಪ್ರೀತಿ ಮಾಡುತ್ತೇವೆಂದು ನೆನಸಿದರೂ, ಮಕ್ಕಳಿಗೆ ದೊಡ್ಡ ಅತ್ಯಂತರ ಮಾಡುವರು. ಆದದರಿಂದ ಹೆತ್ತವರು ಯಾವಾಗಲೂ ಕರ್ತನಾದ ಯೇಸು ಕ್ರಿಸ್ತನು ಹೇಳಿದ ವಚನವನ್ನು ಮನಸ್ಸಿಗೆ ತರ ತಕ್ಕದ್ದು; ಏನಂದರೆ: ಈ ಚಿಕ್ಕವರಲ್ಲಿ ಒಬ್ಬನಿಗೆ ಆತಂಕ ಪಡಿಸುವವನ್ಯಾವನೋ, ಅವನ ಕೊರಳಿಗೆ ಬೀಸುವ ಕಲ್ಲನ್ನು ಕಟ್ಟಿ ಸಮುದ್ರದ ಅಗಾಧದಲ್ಲಿ ಮುಣುಗಿಸಲ್ಪಡುವದು ವಾಸಿ. (ಮತ್ತಾ. ೧೮, ೬.)

೧೭ನೇ ಕ್ರಮವು.

ಬಾಲಶಿಕ್ಷೆಯ ಕೆಲಸದ ವಿಷಯದಲ್ಲಿ ತಂದೆ ತಾಯಿಗಳು ಏಕಮನಸ್ಸಾಗಿರ ಬೇಕು.

ಮಕ್ಕಳಲ್ಲಿ ಒಳ್ಳೇ ಗುಣವನ್ನು ಬೆಳಿಸ ಬೇಕೆಂಬ ಅಪೇಕ್ಷೆಯು ಹೆತ್ತವರಲ್ಲಿ ಇದ್ದರೆ ಅವರು ಮೊದಲು ತಾವೇ ಮಕ್ಕಳ ಮುಂದೆ ಒಳ್ಳೇ ಗುಣ ಉಳ್ಳವರಾಗಿರ ಬೇಕು; ಯಾಕಂದರೆ ತಂದೆ ತಾಯಿಗಳಲ್ಲಿ ಆ ಗುಣಗಳು ಇಲ್ಲದಿದ್ದರೆ ಮಕ್ಕಳಿಗೆ ಎಷ್ಟು ಶಿಕ್ಷೆ ಕೊಟ್ಟು ಎಷ್ಟು ಬುದ್ಧಿಮಾತುಗಳನ್ನು ಹೇಳಿದರೂ ಅವೆಲ್ಲಾ ವ್ಯರ್ಥವಾಗುತ್ತವೆ. ಬಹಳ ತಂದೆ ತಾಯಿಗಳು ತಮ್ಮ ಮಕ್ಕಳು ಒಳ್ಳೆಯವರಲ್ಲವೆಂದೂ, ದಿವಸದಿಂದ ದಿವಸಕ್ಕೆ ಬುದ್ಧಿಹೀನರಾಗಿ ತಮಗೆ ದುಖ್ಖ ಕೊಡುತ್ತಾರೆಂದೂ ಬಹಳವಾಗಿ ಗೋಳಾಡುತ್ತಾರೆ. ಆ

ದರೆ ವಿಚಾರಿಸಿ ನೋಡಿದ್ದಲ್ಲಿ ಆ ದೋಷವು ಮುಖ್ಯವಾಗಿ ಹೆತ್ತವರಲ್ಲಿಯೇ ಉಂಟೆಂದು ಕಾಣ ಬರುತ್ತದೆ. ಅವರು ಬಿತ್ತಿದ್ದನ್ನು ಕೊಯ್ಯುತ್ತಾರೆ. ರೂಢಿಯಾಗಿ ಮಕ್ಕಳ ಗುಣದಿಂದ ತಂದೆತಾಯಿಗಳ ಗುಣ ಎಂಥಾದ್ದೆಂದು ಊಹಿಸ ಬಹುದು. ಬಾಲಶಿಕ್ಷೆಯ ವಿಷಯದಲ್ಲಿ ಮಕ್ಕಳಿಗೆ ತಂದೆಯೂ ತಾಯಿಯೂ ಒಂದೇ ಮನಸ್ಸನ್ನೇ ತೋರಿಸುತ್ತಿರ ಬೇಕು. ಹೆತ್ತವರಲ್ಲಿ ಒಬ್ಬರು ಒಂದು ಒಳ್ಳೇ ಗುಣವನ್ನು ಮಕ್ಕಳಲ್ಲಿ ಬೆಳಿಸಿದರೆ ಅವರೊಳಗೆ ಮತ್ತೊಬ್ಬರು ಅದನ್ನು ಕೆಡವ ಬಾರದು. ಏನಂದರೆ: ಒಂದು ವೇಳೆ ಮಕ್ಕಳಲ್ಲಿ ಏನಾದರೂ ದುಷ್ಟ ಗುಣಗಳು ಇದ್ದು, ತಂದೆಯು ಅವುಗಳನ್ನು ಹೊರಡಿಸ ಬೇಕೆಂದು ಪ್ರಯತ್ನ ಮಾಡುತ್ತಿರುವಾಗ ತಾಯಿಯು ಅದಕ್ಕೆ ಎದುರಿಸದೆ, ಅದರ ವಿಷಯದಲ್ಲಿ ಮಕ್ಕಳಿಗೆ ಸಲಿಗೆ ಕೊಡದೆ, ತಂದೆಯು ಮಾಡುವ ಪ್ರಯತ್ನಕ್ಕೆ ಮಕ್ಕಳನ್ನು ದೂರ ವೈಯ ಬಾರದು; ತಂದೆಯ ಶಿಕ್ಷೆಯು ತಾಯಿಗೆ ಸರಿ ಬೀಳದೆ ಇದ್ದರೂ ಮಕ್ಕಳ ಮುಂದೆ ಅವನ ಸಂಗಡ ವಾದಿಸದೆ, ಏಕಾಂತದಲ್ಲಿ ಅವನಿಗೆ ತಿಳಿಸ ಬೇಕು; ಯಾಕಂದರೆ ತಾಯಿಯ ಮನಸ್ಸು ತಂದೆಯ ಮನಸ್ಸಿಗೆ ಒಪ್ಪುವದಿಲ್ಲವೆಂದು ಮಕ್ಕಳು ಕಂಡಾಗಲೇ ತಂದೆಯ ಶಿಕ್ಷೆ ಎಲ್ಲಾ ನಿರರ್ಥಕವಾಗುತ್ತದೆ. ಅದೇ ಪ್ರಕಾರ ತಂದೆಯು ಸಹಾ ತಾಯಿಯ ಪ್ರಯತ್ನಕ್ಕೆ ಒಪ್ಪದೆ, ಮಕ್ಕಳ ಮುಂದೆ ಅವಳನ್ನು ಅಪಮಾನ ಮಾಡ ಬಾರದು; ಯಾಕಂದರೆ ಇದರಿಂದ ಮಕ್ಕಳು ತಾಯಿಗೆ ಕೊಡ ಬೇಕಾದ ಸ

ನ್ಮಾನವನ್ನು ಕೊಡದೆ ತಾತ್ಸಾರ ಮಾಡುವರು; ಹೀಗೆ ಮಕ್ಕಳು ಇಬ್ಬರಿಗೂ ಒಳಗಾಗದೆ ಹೆಚ್ಚೆಚ್ಚಾಗಿ ಕೆಟ್ಟು ಹೋಗುತ್ತಾರೆ.

೧೮ನೇ ಕ್ರಮವು.

ಮಕ್ಕಳು ಸಂಭಾವಿತರಾಗ ಬೇಕಾದರೆ ತಂದೆ ತಾಯಿಗಳು ತಮ್ಮ ತಮ್ಮೊಳಗೆ ವೃತರಾಗಿರ ಬೇಕು.

ತರಬೇತಾಗುವದಕ್ಕೆ ನನ್ನ ಹತ್ತರ ಇದ್ದ ಶಿಷ್ಯರಲ್ಲಿ ಕೆಲವರು ಸ್ವಲ್ಪ ಸುಮಾರಿನವರೂ ಮೂಢರೂ ಆಗಿದ್ದ ಕಾರಣ ಅವರ ಸಂಗಡ ಎಷ್ಟು ಕಷ್ಟ ಪಟ್ಟರೂ ಅದು ಎಲ್ಲಾ ವ್ಯರ್ಥವಾದೀತೆಂದು ನನಗೆ ತೋಚಿತು. ಆದರೆ ಕಡೆಯಲ್ಲಿ ಅಂಥವರೇ ವಿವೇಕಕ್ಕೆ ಬಂದು ಉತ್ತಮರಾದರು. ಇವರ ಹೊರ್ತು ಮಿಕ್ಕಾದವರು ಆರಂಭದಲ್ಲಿ ಸ್ವಲ್ಪ ಕುಶಲಬುದ್ಧಿಯುಳ್ಳವರಂತೆ ಕಂಡದರಿಂದ ನಾನು ಅವರು ಹ್ಯಾಗಾದರೂ ಒಳ್ಳೆಯವರಾದಾರೆಂಬ ಭರವಸದಿಂದಿದ್ದೆನು. ಆದರೆ ಕಡಿಗೆ ಇವರೇ ಬಹು ಸುಮಾರಿನವರೂ, ಏನೂ ಕೆಲಸಕ್ಕೆ ಬಾರದವರೂ ಎಂದು ಕಾಣ ಬಂತು. ಆಗ ನಾನು ಆಶ್ಚರ್ಯ ಪಟ್ಟು, ಇದರ ಕಾರಣವೇನೆಂದು ಪರೀಕ್ಷಿಸುವಾಗ ವ್ಯಭಿಚಾರದಿಂದ ಹುಟ್ಟಿದ ಮಕ್ಕಳು ಅಭಿವೃದ್ಧಿಯಾಗರೆಂಬ ದೇವರ ವಾಕ್ಯದ ವಚನವು ನನ್ನ ನೆನಪಿಗೆ ಬಂತು. ಆಗ ನನ್ನ ಆಶ್ಚರ್ಯವೆಲ್ಲಾ ನಿವಾರಣವಾಗಿ, ಅದರ ಕಾರಣವು ಇದೇ ಎಂದು

ತಿಳು ಕೊಂಡೆನು. ಅಂದಿನಿಂದ ನಾನು ಉತ್ತಮರಾಗದ ಹುಡುಗರನ್ನು ಕಂಡರೆ ಅವರ ತಂದೆ ತಾಯಿಗಳು ವ್ಯಭಿಚಾರಸ್ಥರೋ ಏನೋ? ಎಂದು ವಿಚಾರಿಸುತ್ತೇನೆ.

೧೮ನೇ ಕ್ರಮವು.

ಒಬ್ಬನಿಗೆ ನಿಷ್ಪ್ರಯೋಜನವಾದ
ಕೆಲಸದಲ್ಲಿ ಎಷ್ಟು ಸಂಬಳ ಶಿಕ್ಕಿದರೂ ಅವನು ಅದರಲ್ಲಿ
ಸಂತೋಷದಿಂದ ಬಹು ಕಾಲ ಇರಲಾರನು.

ಒಂದು ಸಾರಿ ನಾನು ಒಬ್ಬ ವಾಹಿನೀ ಪತಿಯ ಮನೆಗೆ ಹೋದಾಗ ಅವನು ನನಗೆ ಹೇಳಿದ್ದೇನಂದರೆ: ನನ್ನ ಕೆಲಸವು ಅಷ್ಟು ಪ್ರಯೋಜನವಿಲ್ಲದ್ದಾಗಿರುವದರಿಂದ ನನಗೆ ಸಾಕು ಸಾಕಾಯಿತು, ಅಂದನು. ಅದಕ್ಕೆ ನಾನು ಅವನ ಮನೆಯಲ್ಲಿದ್ದ ಒಬ್ಬ ಹುಡುಗಿಯನ್ನು ಕರೆದು — ನೀನು ಒಂದು ಸೌಟನ್ನು ಕೈಯಲ್ಲಿ ಹಿಡಿದು ಕೊಂಡು, ಹೊಸ್ತಲಿನ ಮೇಲೆ ಸುಮ್ಮನೆ ಕೂತುಕೋ; ಹೀಗೆ ಮಾಡಿದರೆ ನಿನಗೆ ದಿನ ಒಂದಕ್ಕೆ ಹತ್ತು ರೂಪಾಯಿಯೂ ಆಹಾರವೂ ಶಿಕ್ಕುವದು. ಇದೇ ಪ್ರಕಾರ ನೀನು ಈ ಕೆಲಸದಲ್ಲಿ ಮೂರು ತಿಂಗಳು ಇರ ಬೇಕೆಂದು ಹೇಳಿದೆನು. ಆಗ ಆ ಹುಡುಗಿಯು ಬಹಳ ಸಂತೋಷದಿಂದ ಸೌಟನ್ನು ಹಿಡು ಕೊಂಡು, ನಾನು ಹೇ

ಳಿದ ಹಾಗೆಯೇ ಸುಮ್ಮನೆ ಕೂತು ಕೊಂಡಳು. ಆಗ ನಾನು ಆ
ವಾಹಿನೀ ಪತಿಗೆ—ಇಗೋ ಇನ್ನು ಮುಂದೆ ಏನಾಗುವದೆಂದು
ನೋಡಿರಿ, ಅಂದೆನು. ಸ್ವಲ್ಪ ಹೊತ್ತಾದ ಮೇಲೆ ಆ ಹುಡುಗಿ
ಯು ಆಲೋಚನೆ ಮಾಡಿ, ನಾನು ಸುಮ್ಮನೆ ಕೂತು ಕೊಂಡರೆ
ನೀವು ನಿಶ್ಚಯವಾಗಿ ನನಗೆ ದಿನ ಒಂದಕ್ಕೆ ಹತ್ತು ರೂಪಾಯಿ
ಕೊಟ್ಟೀರೋ? ಯಾಕಂದರೆ ಇದು ಉಪಯೋಗವಿಲ್ಲದ ಕೆಲಸ
ವೆಂದು ಕಾಣುತ್ತದೆ, ಎಂದು ಹೇಳಿದಳು. ಅದಕ್ಕೆ ನಾವು
ನಿಶ್ಚಯವಾಗಿ ಕೊಡುತ್ತೇವೆ; ಏನೂ ಸಂಶಯ ಹಿಡಿಯ ಬೇಡ,
ಅಂದೆವು. ಆಗ ಅವಳು ಆಹಾ ಅಷ್ಟು ಶಿಕ್ಕಿದರೆ ನಾನು ಒಳ್ಳೇ
ನಾಜೂಕು ವಸ್ತ್ರಗಳ ಉಡಿಗೆ ಮಾಡಿ ಕೊಂಡು ಸಂತೋಷದಿಂದ
ಅಡ್ಡಾಡುವೆನು, ಎಂದಂದಳು. ತಿರಿಗಿ ನಾನು ವಾಹಿನೀ
ಪತಿಗೆ—ಇನ್ನು ಸ್ವಲ್ಪ ಹೊತ್ತಿನ ಮೇಲೆ ಇವಳು ಬೈಯಲಿಕ್ಕೆ
ಆರಂಭ ಮಾಡಿ, ಆ ಕೆಲಸವನ್ನು ಒಗಡಿಸಿ ಓಡುವಳು, ನೀವು
ಮಾತ್ರ ಅವಳನ್ನು ಮಾತಾಡಿಸದಿರಿ, ಎಂದು ನಾವು ಮಾತಾಡು
ತ್ತಾ ಕೂತಿರುವಾಗ, ಆ ಹುಡುಗಿಯು ಫಕ್ಕನೇ ಹೊಸ್ತಲಿನಿಂದೆ
ದ್ದು, ಬಹಳ ಶಿಟ್ಟಿನಿಂದ ಆ ಸೌಟನ್ನು ಮೇಜು ಅದರುವ ಹಾ
ಗೆ ಅದರ ಮೇಲೆ ಬಿಸಾಡಿ, ನಿಮ್ಮ ಹಣವು ಬೇಡವೇ ಬೇಡ; ನಾ
ನು ಈ ಪ್ರಯೋಜನವಿಲ್ಲದ ಕೆಲಸದಲ್ಲಿ ನನ್ನ ಸಮಯವನ್ನು ಕ
ಳಿಯಲಾರೆ; ಯಾವದಾದರೂ ಒಂದು ಪ್ರಯೋಜನವುಳ್ಳ ಕೆಲ
ಸವಿದ್ದು, ಅದರಿಂದ ಸ್ವಲ್ಪ ಸಂಬಳ ನನಗೆ ಶಿಕ್ಕಿದರೂ ಅದೇ ನನ

ಗೆ ಸಾಕು, ಎಂದು ಹೇಳಿದಳು. ವಾಹಿನೀ ಪತಿಯು ಇದನ್ನು ಕಂಡು, ಸಂತೋಷದಿಂದ ಆಶ್ಚರ್ಯ ಪಟ್ಟು, ಹುಡುಗಿಯು ಹೀಗೆ ಮಾಡ್ಯಾಳು ಎಂಬುವದು ನಿಮಗೆ ಮೊದಲೇ ಹ್ಯಾಗೆ ಗೊತ್ತಾಯಿತು? ಎಂದು ನನ್ನನ್ನು ಕೇಳಿದನು. ಅದಕ್ಕೆ ನಾನು, ಈ ಹುಡುಗಿಯು ನೆನಸುವ ಹಾಗೆ ನೀವೂ ನೆನಸುತ್ತೀರಿ, ಆದರೆ ಒಂದು ಮಾತ್ರ ಹೆಚ್ಚು ಕಡಿಮೆ ಉಂಟು; ಅದೇನಂದರೆ: ಹುಡುಗಿಯು ಸೌಟನ್ನು ಒಂದು ತಾಸು ಮಾತ್ರವೇ ಹಿಡು ಕೊಂಡಿದ್ದಳು. ಆದರೆ ನೀವು ಬಹಳ ವರುಷಗಳಿಂದ ಅದನ್ನು ಹಿಡಿಯುತ್ತಾ ಇದ್ಧೀರಿ, ಈಗ ನಿಮಗೂ ಸಹಾ ಸಾಕಾಗಿ, ಅದನ್ನು ಒಗಡಿಸಬೇಕೆಂಬ ಮನಸ್ಸಾಯಿತು, ಎಂದು ಹೇಳಿದೆನು.

ಇಂಥಾ ಮನಸ್ಸುಳ್ಳವರನ್ನು ನಾನು ಅನೇಕ ಉದ್ಯೋಗಗಳಲ್ಲಿ ಕಂಡು ಕೊಂಡೆನು. ಅವರು ಮಾಡುವ ಕೆಲಸವು ಎಷ್ಟು ನಿಷ್ಪ್ರಯೋಜನವಾದದ್ದೋ ಅಷ್ಟು ಹೆಚ್ಚು ಅವರಿಗೆ ಬೇಸರ ಹುಟ್ಟುವದು; ಮತ್ತು ಎಷ್ಟು ಸಂಬಳ ಶಿಕ್ಕಿದರೂ ಅದರಲ್ಲಿ ಸಂತೋಷದಿಂದಿರ ಕೂಡದು. ಆದದರಿಂಥ ಏನಾದರೂ ಪ್ರಯೋಜನವಾದ ಸಣ್ಣ ಕೆಲಸವನ್ನು ಮಾಡುವವರು ತಮ್ಮ ಕೆಲಸದಲ್ಲಿ ಕಷ್ಟಪಡ ಬೇಕಾಗಿದ್ದರೂ ಅವರಿಗಿಂತ ಹೆಚ್ಚು ಸಂತೋಷದಿಂದಿರುವರು.

೨೦ನೇ ಕ್ರಮವು.

ನಮ್ಮ ಸ್ವಂತ ಚಿಂತೆಗಳು ನಮ್ಮನ್ನು ನಮಗೆ ಸಂಭವಿಸುವ ಗಂಡಾಂತರದಿಂದ ತಪ್ಪಿಸಲಾರವು.

ಪ್ಲಟಿಕ್ ಧೊರೆಯು ಮುಪ್ಪಿನ ಕಾಲದಲ್ಲಿ ತಮ್ಮ ಮೇಲು ಪ್ಪರಿಗೆಯ ಕೋಣೆಯಲ್ಲಿ ಕುರ್ಚಿಯ ಮೇಲೆ ಕೂತು ಕೊಂಡು, ತಮ್ಮ ವಾಡಿಕೆಯ ಪ್ರಕಾರ ಪ್ರಾರ್ಥನೆ ಮಾಡುತ್ತಾ, ದೇವರ ವಾಕ್ಯವನ್ನು ಧ್ಯಾನಿಸುತ್ತಾ ಇರಲಾಗಿ, ಅವರ ಮಕ್ಕಳಲ್ಲಿ ಆರು ವರುಷದ ಒಬ್ಬ ಹುಡುಗನು ಆ ಕೋಣೆಯ ಕಿಟಕಿಯ ಮೇಲೆ ಒರಗಿ ಬಿದ್ದು ಕೆಳಗೆ ಹಣಿಕಿ ನೋಡುತ್ತಿರುವಾಗ ಮುಂಚಿಕೋಲೆ ಯಿಂದ ಹೊರಳಿ ಬೀದಿಗೆ ಬಿದ್ದನು. ಆಗ ಅವರು ತನ್ನ ಮಗ ಳನ್ನು ಕರೆದು, ಅವಳಿಗೆ—ನೀನು ಹೋಗಿ, ಕೆಳಗೆ ಬಿದ್ದ ಮಗುವ ನ್ನು ಎತ್ತಿ ಕೊಂಡು ಬಾ, ಎಂದು ಹೇಳಿದರು. ಹಾಗೆಯೇ ಅವ ಳು ಕೆಳಗೆ ಹೋಗಿ, ಆ ಮಗುವನ್ನು ತಂದಾಗ ಅದಕ್ಕೆ ಏನು ಹಾ ನಿ ಆಗಿದ್ದಿಲ್ಲ. ಅಷ್ಟರಲ್ಲಿ ಈ ವರ್ತಮಾನವನ್ನು ಊರಿನವರೊಳ ಗೆ ಅನೇಕರು ಕೇಳಿ, ಅವರ ಮನೆಗೆ ಕೂಡಿ ಬಂದರು. ಅವರೊಳ ಗೆ ಪ್ಲಟಿಕ್ ಧೊರೆಯ ಮಾಳಿಗೆಗೆ ಎದುರಾಗಿದ್ದ ಮನೆಯ ಒಬ್ಬ ಹೆಂಗಸು ಬಗಲೊಳಗೆ ತನ್ನ ಮಗನನ್ನು ಎತ್ತಿ ಕೊಂಡು ಬಂದು, ಅವರಿಗೆ ಶಿಟ್ಟು ಮಾಡಿ ಹೇಳಿದ್ದೇನಂದರೆ: ಅಯ್ಯಾ, ಇನ್ನು ಮೇ

ಲೆ ನಾನು ನನ್ನ ಮಗನನ್ನು ಎಂದಿಗೂ ನಿಮ್ಮ ಹತ್ತರ ಕಳುಹಿಸೆ
ನು; ಯಾಕಂದರೆ ನೀವು ಆ ಕೋಣೆಯಲ್ಲಿ ಕೂತಿದ್ದಾಗ್ಯೂ ನಿಮ್ಮ
ಮಗನನ್ನು ಕೆಳಗೆ ಬೀಳ ಗೊಟ್ಟಿರಿ; ಇದರ ವಿಷಯ ನನಗೆ ಅಷ್ಟು
ಸಿಟ್ಟಿಲ್ಲ, ಆದರೆ ಅದು ಬಿದ್ದ ಮೇಲೆ ನೀವು ಕುರ್ಚಿಯಿಂದ ಸ್ವಲ್ಪ
ವಾದರೂ ಏಳದೆ, ಸುಮ್ಮನೆ ಕೂತಲ್ಲಿಯೇ ಮಾತ್ರ ನಿಮ್ಮ ಮಗ
ಳನ್ನು ಕರೆದು, ಅದನ್ನು ತರುವದಕ್ಕೆ ಹೊರಗೆ ಕಳುಹಿಸಿದಿರಿ; ಇಷ್ಟೆ
ಲ್ಲಾ ನಾನು ಕಣ್ಣಾರೆ ಕಂಡೆನು; ಆದರೆ ನನ್ನನ್ನು ನೋಡಿರಿ, ನ
ನ್ನ ಸ್ವಭಾವ ಬೇರೆ, ನಾನು ಈ ನನ್ನ ಮಗನನ್ನು ನನ್ನ ಕೈಯಿಂ
ದ ಇಳಿಸದೆ ಯಾವಾಗಲೂ ಅವನನ್ನು ನೋಡುತ್ತಾ ಇರುತ್ತೇನೆ,
ಎಂದು ಹೀಗೆ ಝಗಳಾಡುತ್ತಾ ಇರುವಾಗ, ಅವಳ ಮಗನು ಅ
ವಳ ಕೈಯಿಂದ ಕೆಳಗೆ ಇಳಿದು, ಅಲ್ಲಿದ್ದ ಒಂದು ಅಡ್ಡಣಿಗೆಯ
ಮೇಲೆ ಹತ್ತಿ ನಿಂತಾಗ ಕೆಳಗೆ ಬಿದ್ದು ಕೈ ಮುರ ಕೊಂಡನು. ಆ
ಗ ಧೊರೆಯು ಅವಳಿಗೆ ಹೇಳಿದ್ದೇನಂದರೆ — ಎಲೋ ತಾಯಿ
ಯೇ, ನಾನು ಮುಪ್ಪಿನವನು, ಮತ್ತು ನನಗೆ ಬಹಳ ಮಕ್ಕಳು
ಇರುವದರಿಂದ ಅವರೆಲ್ಲರನ್ನು ಪರಾಮರಿಸುವದಕ್ಕೆ ನನ್ನಿಂದಾಗ
ದು; ಆದ ಕಾರಣ ನಾನು ಬೆಳಿಗ್ಗೆ ಎದ್ದಾಗಲೇ ನನ್ನ ಎಲ್ಲಾ ಮ
ಕ್ಕಳನ್ನು ಮನಃಪೂರ್ವಕವಾದ ಪ್ರಾರ್ಥನೆಯಿಂದ ದೇವರ ಕೈಯ
ಲ್ಲಿ ಒಪ್ಪಿಸುತ್ತೇನೆ. ಹೀಗಿರುವದರಿಂದ ಅವರು ಬಿದ್ದರೆ ಪ್ರಿಯ
ರಾದ ದೂತರ ಕೈಯಲ್ಲಿ ಬೀಳುತ್ತಾರೆಂದು ನಾನು ಬಲ್ಲೆನು; ಆ
ದರೆ ನೀನು ಯಾವಾಗಲೂ ನಿನ್ನ ಮಕ್ಕಳನ್ನು ನೀನೇ ಕಾಯ

ಬೇಕಾಪದರಿಂದ ಅವರನ್ನು ಕೇಡಿಗೆ ತಪ್ಪಿಸಲಿಕ್ಕೆ ನಿನ್ನಿಂದ ಆಗದು ಎಂದು ಹೇಳಿ, ಕೂಡಿ ಬಂದ ಸಮಸ್ತರಿಗೆ ಉಪದೇಶವನ್ನು ಮಾಡಿದರು.

೨೧ನೇ ಕ್ರಮವು.

ಮನಸ್ಸಿಗೆ ತರ ತಕ್ಕಂಥಾ ಎರಡು ಮಾತುಗಳು.

ಒಂದಾನೊಂದು ದಿವಸದಲ್ಲಿ ಕೆಲವು ಘನಸ್ತರು ನನ್ನ ಮನೆಗೆ ಕೂಡಿ ಬಂದಾಗ — ಮನುಷ್ಯನು ಈ ಲೋಕವನ್ನು ಬಿಟ್ಟ ಮೇಲೆ ಅವನಿಗೆ ಏನು ಆಗುವದು? ಅವನು ಯಾವ ಸ್ಥಿತಿಯಲ್ಲಿ ಶೇರುವನು? ಎಂಬುವದರ ವಿಷಯಕ್ಕೆ ಸಂಭಾಷಣೆ ಮಾಡ ಬೇಕೆಂದಿದ್ದೆವು. ಆಗ ಅವರಲ್ಲಿ ಒಬ್ಬನು ಉತ್ತರ ಕೊಟ್ಟು, ಆ ಸ್ಥಿತಿಯ ವಿಷಯ ನಮಗೆ ನಿಶ್ಚಯವಾದ ಗೊತ್ತು ಇಲ್ಲದ ಕಾರಣ ಅದರ ವಿಷಯವಾದ ಆಲೋಚನೆ ಸಂಭಾಷಣೆ ಮಾಡುವದನ್ನೇ ಬಿಟ್ಟರೆ ಉತ್ತಮವಾಗಿ ಕಾಣುತ್ತದೆ, ಎಂದು ಹೇಳಿದನು. ಆಗ ನಾನು ಒಂದು ಕಿಟಿಕಿಯ ಸಮೀಪಕ್ಕೆ ಹೋಗಿ, ಅವರನ್ನು ಅಲ್ಲಿಗೆ ಕರೆದು ಕೆಳಗೆ ನೋಡಿರಿ, ಅಂದೆನು. ಅವರು ಕೆಳಗೆ ನೋಡಿದಾಗ ಕೆಲವು ಎಮ್ಮೆ ಕೋಣಗಳು ಮೇಯುತ್ತಿರುವದನ್ನು ಹೊರ್ತು ಮತ್ತೇನು ಕಾಣದೆ ಆಶ್ಚರ್ಯ ಪಟ್ಟು, ಏನು? ನಮ್ಮನ್ನು ಯಾಕೆ ಕರೆದಿರಿ? ಅಂದರು. ನಾನು, ಈ ಎಮ್ಮೆಗಳಿಗೆ ಹುಲ್ಲು ಸೀ

ರು ಮಾತ್ರ ಶಿಕ್ಕಿದರೆ ಸಾಕು; ಅವುಗಳು ಸತ್ತ ಮೇಲೆ ತಮಗೆ ಏನಾದೀತೆಂಬ ಯೋಚನೆಯನ್ನು ಮಾಡುವದಿಲ್ಲ. ಹಾಗೆಯೇ ಒಬ್ಬನು ಸತ್ತ ಮೇಲೆ ಏನು ಆಗುವದೆಂಬ ವಿಚಾರಣೆಯನ್ನು ಮಾಡದೆ ಹೋದರೆ ಅವನು ಸಹಾ ಒಂದು ಕೋಣ ಎಂದು ನೆನಸಬೇಕು, ಅಂದೆನು.

ಮತ್ತೊಂದು ಸಮಯದಲ್ಲಿ ಒಬ ಅಧಿಪತಿಯು ನನ್ನ ಬಳಿಗೆ ಬಂದು, ಮನುಷ್ಯನಿಗೆ ಸಾವು ಬಂದ ಬಳಿಕ ಅವನಿಗೆ ಏನು ಸಂಭವಿಸುವದು ಎಂಬುವದರ ವಿಷಯಕ್ಕೆ ಬಹು ಜನರ ಹತ್ತರ ಕೇಳಿ ಕೊಂಡೆನು; ಆದರೆ ಈ ಪ್ರಶ್ನೆ ಕೇಳಿದವರು ನನಗೆ ಏನೂ ಉತ್ತರ ಕೊಡದೆ ನನ್ನ ಮಾತಿಗೆ ನಕ್ಕು ಹಾಸ್ಯ ಮಾಡಿದರು. ಅಂದಿನಿಂದ ಈ ಮಾತಿನ ಸಲುವಾಗಿ ಅಗದಿ ವಿಚಾರಣೆ ಮಾಡ ಬಾರದೆಂಬ ಪ್ರತಿಜ್ಞೆಯನ್ನು ಮಾಡಿ ಕೊಂಡಿದ್ದೇನೆ, ಆದರೂ ಸತ್ತ ಮೇಲೆ ಏನು ಆಗುತ್ತದೆಂಬದರ ವಿಷಯಕ್ಕೆ ಒಂದು ನಿಶ್ಚಯವಾದ ಗೊತ್ತು ಉಂಟೋ ಇಲ್ಲವೋ ಎಂಬುವದನ್ನು ತಿಳಿಯುವದಕ್ಕೆ ನನಗೆ ಬಹು ಆಶೆ ಅದೆ, ಅಂದನು. ಆಗ ನಾನು — ನೀವು ಸತ್ತ ಮೇಲೆ ಇನ್ನೂ ಅಧಿಪತಿಗಳಾಗಿ ಐಶ್ವರ್ಯವಂತರಾಗಿರುವಿರೆಂದು ನೆನಸುತ್ತೀರಾ? ಅಂದೆನು. ಅದಕ್ಕವನು ಸಂಗಡಲೇ — ಇಲ್ಲಾ, ಹೀಗೆ ನಾನು ನೆನಸುವದಿಲ್ಲ, ಅಂದನು. ನಾನು — ನೀವು ಹೀಗೆ ನಿಶ್ಚಯವಾಗಿ ನಂಬುತ್ತೀರಾ? ಅಂದಾಗ ಅವನು ನಿಶ್ಚಯವೆಂದು ಹೇಳಿದನು. ಆಗ ನಾನು — ಹಾಗಾದರೆ ನಿಮಗೆ

ಒಂದು ನಿಶ್ಚಯವಾದ ಗೊತ್ತು ಇದ್ದ ಹಾಗಾಯಿತು; ಸತ್ತ ಮೇಲೆ ಈಗಿನ ಸ್ಥಿತಿಯು ತಿರುಗಿ ಬರುವದಿಲ್ಲವೆಂಬುವದಿಷ್ಟೇ ನೀವು ತಿಳು ಕೊಂಡಿದ್ದರೆ ಸಾಕು; ಇದರ ಮೇಲಿನಿಂದ ಆಲೋಚನೆ ಮಾಡಿದರೆ ಇದಕ್ಕಿಂತ ಹೆಚ್ಚಾದದ್ದು ಇನ್ನು ಮುಂದೆ ತಿಳಿಯುವದು, ಹೋಗಿರೆಂದು ಹೇಳಿದೆನು.

೨೨ನೇ ಕ್ರಮವು.

ಅವಶ್ಯವಾಗಿರುವ ಬೇರೆ ಎರಡು ಮಾತುಗಳು.

ಒಂದಾನೊಂದು ದಿವಸದಲ್ಲಿ ಒಬ್ಬ ಮನುಷ್ಯನು ನನ್ನ ಹತ್ತರ ಬಂದು ಮಾತಾಡುತ್ತಿರುವಾಗ ತಾನು ೯ ವರುಷಗಳ ಹಿಂದೆ ಮಾನಸಾಂತರ ಪಟ್ಟು ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಸದ್ಭಕ್ತನಾದೆನು, ಎಂದು ಹೇಳಿದನು. ಆಗ ನಾನು, ನಿನ್ನ ಊರಿನಲ್ಲಿ ಇನ್ನೂ ಎಷ್ಟು ಮಂದಿ ಸತ್ಯವಂತರಾದ ಭಕ್ತರು ಇದ್ದಾರೆ? ಅಂದಾಗ, ಅವನು ತನ್ನ ಹೊರ್ತು ಬೇರೆ ಯಾರೂ ಸದ್ಭಕ್ತರಿಲ್ಲವೆಂದನು. ಅದಕ್ಕೆ ನಾನು, ಏನು? ನಿನ್ನ ಹೊರ್ತು ಮತ್ಯಾರೂ ಸದ್ಭಕ್ತರಿಲ್ಲವೆಂದು ಹೇಳಿದಿ ಅಲ್ಲ? ನೀನು ಒಂಭತ್ತು ವರುಷದಿಂದ ಕರ್ತನ ಕಡೆಗೆ ತಿರುಗಿ, ನಿನ್ನ ಹೊರ್ತು ಮತ್ತೊಬ್ಬರು ಭಕ್ತರಿಲ್ಲದಿದ್ದರೆ ನೀನು ಸಹಾ ನಿಜ ಭಕ್ತನಲ್ಲವೆಂದು ಹೇಳಿದೆನು. ಅವನು ನನ್ನ ಮಾತಿಗೆ ಬೆರಗಾಗಿ, ನನ್ನನ್ನು ಬಿಟ್ಟು, ತನ್ನ

ಊರಿಗೆ ಹೋಗಿ, ಕೆಲವು ಕಾಲದ ತರುವಾಯ ತಿರಿಗಿ ನನ್ನ ಬಳಿಗೆ ಬಂದು, ಸಂತೋಷದಿಂದ — ನೀವು ಹಿಂದೆ ಹೇಳಿದ ಮಾತಿನಿಂದ ನಾನು ಎಚ್ಚರಿಕೆಯಾಗಿ, ಮತ್ತೊಬ್ಬರಿಗೆ ಆತಂಕವಾಗಿ ನನ್ನೊಳಗಿದ್ದ ಪಾಪವನ್ನು ಬಿಟ್ಟ ಕಾರಣ ಈಗ ನನ್ನ ಊರಿನವರಲ್ಲಿ ೧೨ ಮಂದಿ ನನ್ನ ಮನೆಗೆ ಬಂದು, ನನ್ನ ಸಂಗಡ ದೇವರ ವಾಕ್ಯವನ್ನು ಧ್ಯಾನಿಸುತ್ತಾ ಪ್ರಾರ್ಥನೆ ಮಾಡುತ್ತಾ ಸದ್ಭಕ್ತರಾಗಿ ಇರುತ್ತಾರೆ, ಎಂದು ಹೇಳಿದನು.

ಒಬ್ಬ ಮನುಷ್ಯನು ನಾನು ಪ್ರಸಂಗ ಮಾಡುವಾಗಲೆಲ್ಲಾ ತಪ್ಪದೆ ಹಾಜರಾಗಿ ಪ್ರಸಂಗವನ್ನು ಕೇಳಿ, ಚಿಂತೆಯಿಂದ ಅದನ್ನು ಗ್ರಹಿಸುವವನಂತೆ ತೋರಿಸುತ್ತಿದ್ದನು. ಆದರೆ ಎಷ್ಟು ಸರ್ತಿ ಕೇಳಿದರೂ ಅದರಿಂದ ಅವನಿಗೆ ಏನೂ ಪ್ರಯೋಜನವಾಗದೆ, ಅವನ ನಡತೆಯು ಬದಲಾಗಿ ಉತ್ತಮವಾಗಲಿಲ್ಲ. ಅದನ್ನು ನಾನು ತಿಳುಕೊಂಡು, ಅವನನ್ನು ನನ್ನ ಮನೆಗೆ ಕರೆಸಿ, ಅವನಿಗೆ ಒಂದು ಹೊಸ ಮೋಚೆಯ ಜೋಡನ್ನು ಕೊಟ್ಟೆನು. ಅವನು ಸಂತೋಷದಿಂದ ಅಧನ್ನು ತಕ್ಕೊಂಡು, ಇವರು ನನ್ನ ಮೇಲೆ ಯಾಕೆ ಇಷ್ಟು ದಯ ಮಾಡುತ್ತಾರೆಂದು ಆಶ್ಚರ್ಯ ಪಡುತ್ತಿರುವಾಗ್ಯೆ, ನಾನು ಅವನಿಗೆ — ನೀವು ಬಹಳ ದಿವಸಗಳಿಂದ ಪ್ರಸಂಗವನ್ನು ಕೇಳುವದಕ್ಕೆ ಬರುತ್ತೀರಿ, ಅದು ಬಹಳ ಒಳ್ಳೇದು, ಅಂದೆನು. ಅವನು ಈ ಮಾತನ್ನು ಕೇಳುತ್ತಲೇ ಗರ್ವ ಪಟ್ಟು, ನಾನು ಒಳ್ಳೆಯವನಾಗಿರುವದರಿಂದ ಇವರು ನನಗೆ ಮೆಚ್ಚುತ್ತಾರೆಂದು ನೆನಸಿ ಕೊಂಡನು.

ಆಗ ನಾನು ಶೀಗಿ – ನೀವು ಇಷ್ಟು ದಿವಸ ದೇವರ ವಾಕ್ಯವನ್ನು ಕೇಳಿದರೂ ಅದರಿಂದ ನಿಮಗೆ ಏನೂ ಪ್ರಯೋಜನವಾಗಲಿಲ್ಲ. ಆದದರಿಂದ ನಿಷ್ಪ್ರಯೋಜನವಾದ ಕೆಲಸಕ್ಕೆ ನಿಮಗೆ ಏನು ನಷ್ಟವಾಗದ ಹಾಗೆ ಈ ಜೋಡನ್ನು ಕೊಟ್ಟೆನು; ಯಾಕಂದರೆ ನೀವು ಇಷ್ಟು ದಿವಸ ದೇವಾಲಯಕ್ಕೆ ಬರುವದರಿಂದ ನಿಮ್ಮ ಒಂದು ಮೋಚೆಯ ಜೋಡು ಹರದು ಹೋಗಿದ್ದೀತು, ಎಂದು ಹೇಳಿದೆನು.

ಸಮಾಪ್ತಿ.

ಪ್ಲಟಿಕ್ ಧೊರೆಯು

ರಚಿಸಿದ

ಸಂಸಾರಕ್ರಮಗಳ ಪುಸ್ತಕವು



MANGALORE

PRINTED BY PLEBST & STOLZ, BASEL MISSION PRESS
1867